ಅಪರಂಜಿ

ನವಂಬರ್
1996
ತಿಳಿನಗೆಯ ಕಾರಂಜಿ



* ಪ್ರಕಾಶ್
* ಎಂ. ಎನ್. ಕೆ.
* ಪ್ರಭಾ
* ಸುಶೀಲಾ ಸೂರ್ಯನಾರಾಯಣ
* ಅರುಣಾ ಕಾರಂತ
* ಸಾ.ಕೃ. ಪ್ರಕಾಶ
* ಜಿ. ವಿ. ಅರುಣ
* ಪ್ರೊ| ಕೆ.ಎಸ್. ನಿಸಾರ್ ಅಹಮದ್
* ಅ. ರಾ. ಸೇ.
* ತುರುವೇಕೆರೆ ಪ್ರಸಾದ್

ಬಿಡಿ ಪ್ರತಿ: 2 ರೂ. 50 ಪೈ.




ಗೌರವ ಸಲಹೆಗಾರರು:	ಚಂದಾ ವಿವರ:
ಶ್ರೀ ಅ. ರಾ. ಸೇ.	ಬಿಡಿ ಪ್ರತಿ: ರೂ. 2.50
ಶ್ರೀ ಶೇಷಗಿರಿ	ವಾರ್ಷಿಕ ಚಂದಾ: ರೂ. 25
ಸಂಪಾದಕ: ಶಿವಕುಮಾರ್	ಆಜೀವ ಚಂದಾ : ರೂ. 250

ವಿಳಾಸ: ಅಪರಂಜಿ ಕಾರ್ಯಾಲಯ, 36, 6ನೇ ಮುಖ್ಯ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560 003 (ಕೆಲಸದ ವೇಳೆ: ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ)

ಈ ಸಂಚಿಕೆಯಲ್ಲಿ

ಸಂಪುಟ 13 ಮಾರ್ಚ್ 96 ಸಂಚಿಕೆ-6

ಮುದ್ರಣ: ಇಂಪ್ರೆಶನ್ಸ್, ಬೆಂಗಳೂರು - 3 ಅಕ್ಷರ ಜೋಡಣೆ: ಒಮೇಗಾ ಲೇಸರ್ ಟೆಕ್, ಬೆಂಗಳೂರು 27



○ ಪ್ರಕಾಶ್

ಕಾಶ್ಮೀರ ಚುನಾವಣೆ; ಒಂದೆರಡು ದಿನಗಳಲ್ಲಿ ಪ್ರಧಾನಿ ನಿರ್ಧಾರಕ್ಕೆ

-ಸುದ್ದಿ

ಈ 'ಒಂದೆರಡು' ಎಂಬುದು ನರಸಿಂಹನ ಅನಂತ ಲೀಲೆ!

★ ★ ★

ಸ್ವರ್ಗದ ಸೆಟ್‌ಗಳನ್ನು ನೋಡಿ ಎನ್. ಟಿ. ಆರ್. ಸಂತಸಗೊಂಡರಂತೆ!!

★ ★ ★

ಏನೇ ಬೋರಿ ತಾರಾಟ ಅಂದರೆ, ಸಾಹೇಬರ ಮನೇಲಿ ಹವಾಲದೂಟ ಅನ್ನೋದೆ??

★ ★ ★

ವಿಶ್ವಕಪ್ ಅಬಾಧಿತ ಪ್ರಸಾರ; ಕೆ. ಇ. ಬಿ. ಗೆ ಕೋರ್ಟ್ ಆದೇಶ

-ಕ್ರೀಡಾಸುದ್ದಿ

ನ್ಯಾಯಮೂರ್ತಿಗಳಿಗೂ ಕ್ರಿಕೆಟ್ ಜ್ವರ ತಗುಲಿತೆ?!

★ ★ ★

ಶ್ರೀಲಂಕಾದಲ್ಲಿ ಆಸ್ಟ್ರೇಲಿಯ ಆಡುವುದಿಲ್ಲ

-ಸುದ್ದಿ

ಪ್ರಥಮ ಚುಂಬನೇ ----!!

★ ★ ★

ಗುಲ್ಬರ್ಗ ವಿಶ್ವವಿದ್ಯಾಲಯದ ಕುಲಪತಿಯಾಗಿ ಶ್ರೀಮತಿ ಎಂ. ಮುನಿಯಮ್ಮ

-ಸುದ್ದಿ

ಕಾರ್ಯ ಕಲಾಪಗಳು ಶಾಂತವಾಗಿರಲಿ!!

★ ★ ★

ದಂತವೈದ್ಯ ಕಾಲೇಜಿನಲ್ಲಿ ಹೆಚ್ಚಿನ ಸೀಟುಗಳಿಗೆ ನಕಾರ

-ಸುದ್ದಿ

36 ಸೀಟುಗಳಿಗೆ ಕೇಳಬೇಕಾಗಿತ್ತೇನೋ?!

★ ★ ★

ಟಗ್ ಆಫ್ ವಾರ್ ಅಂತರ ರಾಜ್ಯ ಪಂದ್ಯಗಳು ಫೆಬ್ರವರಿ 21ರಂದು -ಕ್ರೀಡಾಸುದ್ದಿ

ಇದು ಕರ್ನಾಟಕ - ತಮಿಳುನಾಡುಗಳ ನಡುವೆ ಎಂದೋ ಶುರುವಾಯಿತಲ್ಲ!!

★ ★ ★

ಹವಾಲಾ ಅಂದರೆ, ಬ್ರೀಫ್‌ಕೇಸ್ ಮುಟ್ಟಿ ನೋಡಿಕೊಂಡನಂತೆ!!

★★★

ಕಡಲೇ ಕಾಯಿ ಬ್ರೇಕ್ ಫಾಸ್ಟ್

ಎಂ.ಎಸ್.ಕೆ.

ನಾನು ಈಗ ಬರೆಯುತ್ತಿರುವುದು ಬಹಳ ಹಳೆಯ ಕಾಲದ ಮಾತು. ಎಷ್ಟು ಹಳೆಯದೆಂದರೆ ಭಟ್ಟರ ಹೋಟೇಲಲ್ಲಿ ಆರು ಕಾಸಿಗೆ ತುಪ್ಪದ ದೋಸೆ ಸಿಗುತ್ತಿತ್ತು. ಮೂರೇ ಕಾಸಿಗೆ ಒಂದು ಕಪ್ ಕಾಫಿ ಸಿಗುತ್ತಿತ್ತು.

ಹೋಟೇಲಲ್ಲಿ ಇಬ್ಬರು ಒನ್ ಬೈ ಟೂ ಮಸಾಲೆ, ಒನ್ ಬೈ ಟೂ ಕಾಫಿ ಮುಗಿಸಿದರೆ ಬಿಲ್ಲು ಕೇವಲ ಒಂದಾಣೆಯಾಗುತ್ತಿತ್ತು. ಇಡೀ ರಸ್ತೆಗೆ ಒಂದೋ ಎರಡೋ ಸೈಕಲ್‌ಗಳಿರುತ್ತಿದ್ದವು. ಕುಟುಂಬಿಗಳು ತಮ್ಮ ಇಡೀ ಪರಿವಾರವನ್ನು ಜಟಕಾಗಾಡಿಗಳಲ್ಲಿ ತುಂಬಿಕೊಂಡು ಪ್ರಯಾಣಿಸುತ್ತಿದ್ದರು. ಇಡೀ ಬಡಾವಣೆಗೆ ಕೇವಲ ಒಂದೋ ಅಥವಾ ಎರಡೋ ಕಾರುಗಳಿರುತ್ತಿದ್ದವು.

ಮದುವೆಗಳಲ್ಲಿ ವರೋಪಚಾರವಾಗಿ ಸೈಕಲ್ಲುಗಳನ್ನು ಕೊಡುತ್ತಿದ್ದರು. ಹುಡುಗರು ಶಾಲಾ ಕಾಲೇಜುಗಳಿಗೆ ನಡೆದುಕೊಂಡೇ ಹೋಗುತ್ತಿದ್ದರು.

ನನಗೆ ಆಗ 8- 10 ವಯಸ್ಸು. ಪ್ರತಿ ಬೆಳಿಗ್ಗೆ ನನ್ನನ್ನು ಬೇಗ ಎಬ್ಬಿಸಿ ಕೈಗೆ ಐದಾಣೆ ಕೊಟ್ಟು ತರಕಾರಿ ತರಲು ಕಳುಹಿಸುತ್ತಿದ್ದರು. ಬೇಗ ಹೋಗದಿದ್ದರೆ ತರಕಾರಿ ಮಾರುವವರು ಹೊರಟುಹೋಗ್ತಾರಲ್ಲ! ನಾನು ನಿದ್ದೆಗಣ್ಣಲ್ಲೇ ಚೀಲ ಹಿಡಿದು ಓಡುತ್ತಿದ್ದೆ. ಚೌಕಾಶೀ ವ್ಯಾಪಾರವಾದ ಮೇಲೆ ಮೂರೋ ಆರೋ ಕಾಸು ಮಿಗಿಸಿಕೊಂಡು ಅಲ್ಲೇ ಇದ್ದ ಒಬ್ಬ ಭಟ್ಟರ ಡಬ್ಬೀ ಅಂಗಡಿಗೆ ಓಡುತ್ತಿದ್ದೆ.

ಆ ಭಟ್ಟರು ತುಂಬಾ ಬೆಳ್ಳಗೆ ಇದ್ದರು. ದಪ್ಪ ಮೈಕಟ್ಟು. ಆಜಾನುಬಾಹು. ಅವರು ತಮ್ಮ ಸ್ನಾನ ಮುಗಿಸಿ ಹಣೆಗೆ ವೀಭೂತಿ ಧರಿಸಿ ಆಗತಾನೆ ಅಂಗಡಿಯ ಬಾಗಿಲನ್ನು ತೆರೆಯುತ್ತಿದ್ದರು. ನಾನೇ ಅವರ ಬೋಣೀ ಗಿರಾಕಿ. ಅವರು ಬೆಣ್ಣೆ, ಅಡುಗೆಪುಡಿಗಳು ಮತ್ತು ಇತರ ಪದಾರ್ಥಗಳನ್ನು ಮಾರುತ್ತಿದ್ದರು. ನನಗೆ ಆಕರ್ಷಣೆ ಅವರು ಮಾಡುತ್ತಿದ್ದ ಪಕೋಡಾ ಕಳ್ಳೇಕಾಯಿ. ಕಡಲೆಬೀಜವನ್ನು ಹಿಟ್ಟಿನಲ್ಲಿ ಅದ್ದಿ ತುಪ್ಪದಲ್ಲಿ ಹುರಿಯುತ್ತಿದ್ದರು. ಅದರ ರುಚಿ ತಿಂದವರಿಗೇ ಗೊತ್ತು. ನಾನು ದಿನಾ ಅದನ್ನು ಆರು ಕಾಸಿಗೆ ಕೊಂಡು ನನ್ನ ಷರ್ಟಿನ ಜೇಬನ್ನು ತುಂಬಿಸಿಕೊಂಡು ನಿಧಾನವಾಗಿ ಮೆಲುಕುತ್ತಾ ಮನೆಗೆ ಹಿಂದಿರುಗುತ್ತಿದ್ದೆ. ಅದೇ ನನ್ನ ಬ್ರೇಕ್ ಫಾಸ್ಟ್. ಈ ವಿಧಿ ದಿನಂಪ್ರತಿ ಸಾಂಗವಾಗಿ ನಡೆದುಕೊಂಡು ಬರುತ್ತಿತ್ತು.

ಬರುಬರುತ್ತಾ ಭಟ್ಟರು ನನ್ನನ್ನು ನೋಡಿದಕೂಡಲೇ ಗುರುಗುಟ್ಟಲು ಶುರುಮಾಡಿದರು. ಸ್ವಲ್ಪ ಕೋಪ ತೋರಿಸಲು ಶುರು ಹಚ್ಚಿದರು. ಇದು ನನಗೆ ಅರ್ಥವಾಗಲೇ ಇಲ್ಲ. ನಾನು ನನ್ನ ಪಕೋಡಾ ಕಳ್ಳೇಕಾಯಿಯ ಪ್ರಪಂಚದಲ್ಲೇ ಇದ್ದೆ. ಭಟ್ಟರಿಗೆ ಮಾತ್ರಾ ಇದನ್ನು ಸಹಿಸಲು ಅಸಾಧ್ಯವಾಯಿತು. ಒಂದು ದಿನಾ ತಿರುಗಿಬಿದ್ದರು. ವಿಪರೀತ ಕೋಪದಲ್ಲಿ ದಪ್ಪ ಗಂಟಲಿನಲ್ಲಿ ಕೂಗಲು ಶುರುಮಾಡಿದರು. ''ಸುಮಾರು ದಿನದಿಂದ ನೋಡ್ತಾನೇ ಇದೀನಿ ಇವನ್ನ. ದಿನಾ ಬೆಳ್ಳಂ ಬೆಳಿಗ್ಗೇನೆ ಕಳ್ಳೇಕಾಯಿಗೆ ಬರ್ತಾ ಇದ್ದಾನೆ. ಕೊನೆ ಮೊದಲಿಲ್ಲಾ ಇವನ್ಗೆ. ಹೀಗೆ ಬೆಳಗಾಗೆದ್ದು ಕರಿದ ಕಳ್ಳೇಕಾಯಿ ತಿಂದರೆ ಇವನ ಆರೋಗ್ಯದ ಗತಿಯೇನು. ಹೇಳೋರು ಕೇಳೋರು ಯಾರೂ ಇಲ್ಲಾ ಇವನ್ಗೆ. ನಿಂಗೆ ದುಡ್ಡು ಯಾರೋ ಕೊಡೋದು? ಎಲ್ಲಿ ಕದೀತೀಯೋ ದುಡ್ಡನ್ನ? ಇನ್ನೊಂದ್ಸಲ ಬೆಳಗಾಗೆದ್ದು ಕಳ್ಳೇಕಾಯಿಗೆ ಬಂದ್ರೆ ನೋಡ್ಕೊ, ಗ್ರಹಚಾರ ಬಿಡಿಸ್ಬಿಡ್ತೀನಿ. ಹುಷಾರ್. ನಿಮ್ಮನೇಗೇ ಬಂದು ನಿನ್ನ ಅಪ್ಪ ಅಮ್ಮನ್ಗೆ ಹೇಳ್ಬ್ಯಾ ಹೀಗ್ಮಾಡ್ತಿದೀಂತ?'' ಈ ಕೂಗಾಟ ಕೇಳಿ ಸುಮಾರು ಜನ ಜಮಾಯಿಸ್ಕೊಂಡ್ರು. ಎಲ್ಲಾರು ನನ್ನ ಬೈಯ್ಯೋರೆ. ಎಲ್ಲಾರೂ ಬುದ್ಧಿವಾದ ಹೇಳೋರೇ. ಜೋಲು ಮುಖಾ ಹಾಕ್ಕೊಂಡು ಕಳ್ಳೇಕಾಯಿ ವರ್ಜಿತನಾಗಿ ಮನೆಗೆ ಬಂದೆ. ಮತ್ತೆ ಆ ಕಡೆ ಮುಖಾ ಹಾಕ್ಲಿಲ್ಲ. ಆ ಭಟ್ಟರನ್ನು ಅವಾಯ್ಡ್ ಮಾಡ್ಕೊಂಡೇ ತಿರುಗಾಡ್ತಾ ಇದ್ದೆ.

ಆ ಭಟ್ಟರಿಗೆ ತಮ್ಮ ಬೋಣೀ ವ್ಯಾಪಾರ ಮುಖ್ಯವಾಗಿರಲಿಲ್ಲ. ತಮ್ಮ ಪಕೋಡ ಕಳ್ಳೇಕಾಯಿ ಗಿರಾಕಿ ತಪ್ಪಿದ್ದು ಮುಖ್ಯವಲ್ಲ. ಒಬ್ಬ ಚಿಕ್ಕ ಹುಡುಗನ ಆರೋಗ್ಯ ಮುಖ್ಯವಾಗಿತ್ತು. ಹೀಗಿತ್ತು ಆ ಸ್ಕೂಟರ್-ಕಾರ್‌ಗಳಿಲ್ಲದ ಕಾಲ. ಜಟಕಾ-ಗಾಡಿಗಳ ಕಾಲ. ಈಗಿನ ಕಾಲದಲ್ಲಿ ಸ್ಕೂಲ್ಗಳ ಮುಂದೆ ಚಾಕಲೇಟ್ಗೆ ಮಾದಕವಸ್ತುವನ್ನು ಹಚ್ಚಿ ಮಕ್ಕಳಿಗೆ ಮಾರುವ ನೀಚರಿಗೂ ಆ ಭಟ್ಟರಿಗೂ ಅಜಗಜಾಂತರ.

ಈಗ ನಾನು ನನ್ನ ಸಹಧರ್ಮಿಣಿಯ ಕಣ್ಣು ತಪ್ಪಿಸಿ ಪಕೋಡಾ ಕಳ್ಳೇಕಾಯಿ ತಿನ್ನುವಾಗೆಲ್ಲಾ ಆ ಭಟ್ಟರ ವ್ಯಕ್ತಿತ್ವ ನನ್ನ ಕಣ್ಣಮುಂದೆ ನಿಂತಿರುತ್ತದೆ. ಆ ಜಾಗದಲ್ಲಿ ಈಗ ಆ ಡಬ್ಬೀ ಅಂಗಡಿ ಇಲ್ಲ. ಅದು ನೆಲಸಮ ಆಗಿ ಆ ಜಾಗದಲ್ಲಿ ಒಂದು ಭವ್ಯ ಕಟ್ಟಡ ನಿಂತಿದೆ. ಅಲ್ಲಿ ಪಕೋಡಾ ಕಳ್ಳೇಕಾಯಿ ಸಿಗುತ್ತೋ ಇಲ್ಲವೋ ಗೊತ್ತಿಲ್ಲ. ಚಾಟ್ಸ್-ಪಾಟ್ಸ್ ಸಿಗಬಹುದು. ಪಕೋಡಾ ಕಳ್ಳೇಕಾಯಿ ಸಿಕ್ಕಿದರೂ ಅದನ್ನು ಖಂಡಿತಾ ತುಪ್ಪದಲ್ಲಿ ಹುರಿದಿರುವುದಿಲ್ಲ.

ಆ ಡಬ್ಬೀ ಅಂಗಡಿ ಇಲ್ಲದಿದ್ದರೂ ಆ ಜಾಗದಲ್ಲಿ ಭಟ್ಟರ ಭವ್ಯ ವ್ಯಕ್ತಿತ್ವದ ನೆನಪು ನನಗೆ ಸದಾ ಇರುತ್ತದೆ. ☺

ಹವಾಲಾನೇ? ಯಾರೇ ಅವಳು?

ಪ್ರಭಾ

ಮೊನ್ನೆ ಅಂದರೆ ಎನ್.ಟಿ.ಆರ್. ಢಮಾರ್ ಅಂದರಲ್ಲಾ ಅದರ ಹಿಂದಿನ ದಿವಸ ಅಂತ ಕಾಣುತ್ತೆ. ಕಾರ್ಖಾನೆ ಕೂಲಿ ಮುಗಿಸಿಕೊಂಡು ಬೇಗನೇ ಮನೆ ಸೇರಿದ್ದೆ. ಸಾಹಿತ್ಯ ಗೀಹಿತ್ಯದ ಗೇಮೇ ಇಲ್ಲ ಅಂದ ದಿವಸ ಬೇಗ ಮನೆ ಸೇರೇದು ನನ್ನ ಹಾಬಿ. ಹೀಗೆ ಬೇಗ ಮನೆ ಸೇರಿದ ದಿವಸ 'ಅಪ್ಪ ಮನೆಗೆ ಬೇಗ ಬಂದ, ಓದ್ಕೋ ಅಂತ ಬಡ್ಕೋತಾನೆ' ಅಂತ ನನ್ನ ಮಕ್ಕಳು ಒಳಗೊಳಗೇ ಬೈದುಕೊಳ್ತಾವೆ. 'ಹಾಳಾದೇನು ಇವತ್ತೇ ಬೇಗ ಬರ್ಬೇಕೇ? ಪಕ್ಕದ್ಮನೆ ಅವರ ಸಂಗಡ ಆರನೆ ರಸ್ತೆ ಏಳನೇ ಮನೆಯ ಕರೀ ಸಣಕಲಿ ಬಗ್ಗೆ ಮಾತಾಡುತ್ತಿದ್ದೆ. ಅದನ್ನ ಬಿಟ್ಟು ಇವರ ಸಂಗಡ ಕಾಫೀ ಗೀಫೀ ಅಂತ ಹೋಗಲೇಬೇಕಲ್ಲ...' ಅಂತ ನನ್ನಾಕೆ ಸಂಕಟಪಡ್ತಾಳೆ. 'ಇವತ್ತು ಆಸಾಮಿ ಮೂರೂವರೇಗೇ ಗೂಡು ಸೇರಿದ ಹಾಗಿತ್ತು. ಅದರ ಹತ್ತಿರ ಇವತ್ತಾದರೂ ಸಾಲ ವಸೂಲಿ ಮಾಡಬೇಕು...' ಅಂತ ಅಂಗಡಿ ಕಾಕಾ ಪ್ಲಾನ್ ಹಾಕ್ತಾನೆ. 'ಕೈಗೆ ಸಿಗದೇ ತಪ್ಪಿಸಿ ಕೊಳ್ತಾ ಇದ್ದ. ಆದಷ್ಟು ಬೇಗ ಅವನ ಮನೆಗೆ ಹೋಗಿ ಕೂತು ಅವನ ಹತ್ತಿರ ಒಂದು ನೂರೋ ಇನ್ನೂರೋ ಸಾಲ ಇಸ್ಕೊಂಡು ಎಂ.ಜಿ. ರಸ್ತೆಗೆ ಹೋಗಿ ಐಸ್‌ಕ್ರೀಂ ತಿಂದು ಬಿಡಬೇಕು...' ಅಂತ ಐಸ್‌ಕ್ರೀಂ ಅಂದರೆ ಮೈಯೆಲ್ಲಾ ನಾಲಿಗೆ ಆಗುವ ಗೆಳೆಯ ಯೋಚಿಸ್ತಾನೆ.

ಅವತ್ತು ಇಂತಹ ಪರ್ವ ಕಾಲದಲ್ಲಿ ನಾನು ಮನೆ ಸೇರಿದ್ದು.

ಬಿಲದ ಒಳಹೊಕ್ಕವನು ಕೊಳೆ ಬಟ್ಟೆ ತೆಗೆದೆ, ಹೊಳಪಿಗೆ ಲೈಫ್‌ಬಾಯ್ ಪ್ಲಸ್ ಅನ್ನು ಜಾಹೀರಾತಿನಲ್ಲಿ ತೋರಿಸುವ ಹಾಗೆಯೇ ಉಜ್ಜಿ ಉಜ್ಜಿ ತೊಳೆದೆ. ಅಪರೂಪಕ್ಕೆ ಸೂರ್ಯನ ಬೆಳಕು ಇನ್ನೂ ಮನೆ ಮೇಲೆ ಇರುವ ಸಮಯದಲ್ಲೇ ಮನೆ ಸೇರಿದೀನಿ ಚೆನ್ನಾಗಾದರೂ ನನ್ನ ಮುಸುಡಿ ಇವರಿಗೆಲ್ಲಾ ಕಾಣಿಸಲಿ ಅಂತ ನೊರೆ ನೊರೆ ಸೋಪು ಹಾಕಿ ಮುಖತಿಕ್ಕಿದೆ. ಹಲ್ಲಿಗೊಂದು ಚೂರು ಪೇಸ್ಟೂ ಸಹ ತೋರಿಸಿ 'ಆತ್ಮ ವಿಶ್ವಾಸದ ನಗೆ' (ಹೀಗಂದರೇನು ಅಂತ ನನಗೆ ತಿಳೀದು. ಆದರೆ ಈಗ ತಾನೇ ಪೇಸ್ಟ್ ಜಾಹಿರಾತಿನಲ್ಲಿ ಹಲ್ಲಿಗೆ -ಸದರಿ ಪೇಸ್ಟ್‌ನ ಜಾಹಿರಾತಿನಲ್ಲಿ ಆತ್ಮವಿಶ್ವಾಸದ ನಗೆಗಾಗಿ ಈ ಪೇಸ್ಟ್ ಉಪಯೋಗಿಸಿ ಅಂತ ಅದ್ಯಾರೋ ಜಾಹಿರಾತಿನ ಮೇನಕೆ ಹೇಳಿದ್ದಳು. ಆದರಿಂದ ಈ ತಿಂಗಳು ನಮ್ಮ ಸಾಲದ ಅಂಗಡೀಲಿ ಈ ಪೇಸ್ಟ್ ತಂದಿದ್ದೆ.) ಬೀರುತ್ತಾ ಕುರ್ಚಿ ಮೇಲೆ ಕುಕ್ಕರಿಸಿದೆ.

ಬಿಸಿಬಿಸಿ ಕಾಫಿ ಸಮೇತ ಮನೆಯ ಲ್ಯಾಂಡ್‌ಲೇಡಿ ಪ್ರತ್ಯಕ್ಷ ಆದಳು. ಕಾಫಿ ಹೀರಲು ಕಾದರೆ 'ಹವಾಲಾ ಅಂದರೇನು?' ಅಂತ ಕೇಳಿದಳು. ಈಗ ನಿಮಗೆ ಒಂದು ಸಣ್ಣಕತೆ - ಕತೆ ಅಲ್ಲ ನಿಜವಾಗಿ ಹಿಂದೆಂದೋ ನಡೆದ ಪ್ರಸಂಗ ಹೇಳಬೇಕು. ಅದು ನಿಮ್ಮ ಜೀವಮಾನದಲ್ಲೂ ನಡೆದೇ ಇರುತ್ತೆ ಅಂತ ನಂಬಿಕೆ ನನಗಿದೆ. ಆದರೆ ನೀವು ನನಗಿಂತ ಕೊಂಚ ಜಾಸ್ತಿ ಐಕ್ಯೂ ಹೊಂದಿರೋರು ಆಗಿರುವುದರಿಂದ ಸಾಕ್ಷಿಗಳ ಸಮಾಧಿ ಮಾಡಿರ್ತೀರಿ. ಆದರೆ ನಾನು - ಊಹುಂ ಸಾಕ್ಷಿಗಳನ್ನ ಹಾಗೇ ಇಟ್ಟೆ. ಅಲ್ಲಿಂದಲೇ ನನ್ನ ಮಾರಣಹೋಮ ಆರಂಭವಾದದ್ದು.

ನಿಮ್ಮ ತರಹವೇ ನಾನು ಸೆಂಟ್ರಲ್ ಕಾಲೇಜು ಸರ್ಕಾರಿ ಕಾಲೇಜುಗಳಲ್ಲಿ ಮಣ್ಣು ಹೊತ್ತವನು. ಮಣ್ಣು ಹೊರುವ ಕಾಯಕದಲ್ಲಿರುವಾಗ್ಗೆ ಸೆಂಟ್ರಲ್ ಕಾಲೇಜಿನ ಆವರಣದ ಮರಗಿಡ, ಹುಲ್ಲು ಹಸಿರು, ಗಾಳಿ, ಸೂರ್ಯ ಮತ್ತು ಆಗಾಗ್ಗೆ ಚಂದ್ರ ಇವುಗಳ ಒಡನಾಟ ಅನುಭವಿಸಿದವನು. ಮರಗಿಡ, ಹುಲ್ಲು ಹಸಿರು, ಗಾಳಿ, ಸೂರ್ಯ, ಚಂದ್ರ, ನಕ್ಷತ್ರ ಇವುಗಳ ಒಡನಾಟ ಅನುಭವಿಸಬೇಕಾದ ಸಂದರ್ಭಗಳಲ್ಲಿ ನನ್ನ ಸಂಗಡ ಈ ಸಂತೋಷ ಶೇರಿಸಲು - ಅಂದರೆ ಶೇರ್‌ಮಾಡಲು ಕೆಲವು ಸಹಪಾಠಿಗಳೂ ಸಹ ಇರುತ್ತಿದ್ದದ್ದು ಉಂಟು. ಇನ್‌ವೇರಿಯಬಲಿ ಇಂತಹ ಸಹಪಾಠಿಗಳು ಸೀರೆ, ಸಲ್ವಾರ್‌ಖಮೀಜು, ಚೂಡಿದಾರು ಹಾಕಿರುತಿದ್ದದ್ದು ಉಂಟು. ಸೀರೆ, ಸಲ್ವಾರ್‌ಖಮೀಜು, ಚೂಡಿದಾರುಗಳ ಸಂಗ ನಿರಂತರ ಎಂದೋ ಚಿರಂತರ ಎಂದೋ ನಂಬಿರುವವ ನಾನಾಗಿದ್ದೆ ಆಗ. ಅದರ ಜೊತೆಗೆ ನೆಹ್ರೂ, ಪಹ್ರೂ ಮೊದಲಾದವರು ಡೈರಿ ಬರೆಯುತ್ತಿದ್ದದ್ದು ಕೇಳಿದ್ದೆ. ಮುಂದೆ ನಾನು ಎಂದಾದರೂ ಒಂದು ದಿನ ದೊಡ್ಡ ಮನುಷ್ಯ ಆಗಿ ನನ್ನ ಆತ್ಮಚರಿತ್ರೆಯನ್ನು ಬೇರೆಯವರು ಬರೆದರೆ ಅವರಿಗೆ ಅನುಕೂಲವಾಗಲಿ ಎಂದು ಡೈರಿ ಬರೆಯುವ ಅಭ್ಯಾಸ ಇಟ್ಟಿದ್ದೆ. ಈ ಡೈರಿಯಲ್ಲಿ ಮರದ ಕೆಳಗೆ ಯಾರ ಸಂಗಡ ಕೂತಿದ್ದೆ, ಹುಲ್ಲಿನ ಮೇಲೆ ಯಾರ ಸಂಗಡ ಓಡಾಡಿದೆ, ಚಂದ್ರನ ಬೆಳಕಿನಲ್ಲಿ ಯಾರ ಸಂಗಡ ವಾಕಿಂಗ್ ಹೋಗಿದ್ದೆ, ರೆಕ್ಸ್ ಥಿಯೇಟರಿನಲ್ಲಿ ರೋಮನ್ ಹಾಲಿಡೆ ಪಿಕ್ಚರ್ ಅನ್ನು ಯಾರ ಸಂಗಡ ಎಷ್ಟನೇ ನಂಬರಿನ ಸೀಟಿನಲ್ಲಿ ಕೂತು ನೋಡಿದೆ, ವಿಠ್ಠಲ ವಿಹಾರದಲ್ಲಿ ಬೋಂಡ ಸಾಂಬಾರ್ ಯಾರ ಸಂಗಡ ಬೈಟುಮಾಡಿದ್ದು... ಮೊದಲಾದ ವಿವರಗಳನ್ನು ಆತ್ಮಚರಿತ್ರೆ ಬರೆಯುವವರ ಅನುಕೂಲಕ್ಕೆ ಎಂದು ದಾಖಲಿಸಿದ್ದೆ. ಈ ದಾಖಲೆಗಳನ್ನು ಇನ್ನೂರು ಪೇಜಿನ ಹದಿನಾರು ಪುಸ್ತಕಗಳು - ನೆನಪಿರಲಿ - ಇನ್ನೂರು ಪೇಜಿನ ಹದಿನಾರು ಪುಸ್ತಕಗಳು - ಜೋಪಾನವಾಗಿ ಜತನದಿಂದ ಕಾದಿರಿಸಿದ್ದೆ.

ಸೆಂಟ್ರಲ್ ಕಾಲೇಜು, ಸರಕಾರೀ ಕಾಲೇಜು ಮುಗೀತು. ಕಣ್ಣೆದುರಿನ ಮಬ್ಬು ಕರಗಿತು. ಹಂಗೂ ಹಿಂಗೂ ನನ್ನದೇ ಸಂಪೂರ್ಣ 'ಮೆರಿಟ್' ಆಧಾರದ ಮೇಲೆ

ಕಾರ್ಖಾನೇಲಿ ಕೂಲಿ ಕೆಲಸವೂ ಸಿಕ್ತು. ಕೆಲಸ ಸಿಕ್ಕಿ ಅದೆಷ್ಟೋ ಶತಮಾನದ ನಂತರ ನನ್ನಾಕೆ ನನ್ನ ಕೈಹಿಡಿದಳು. ದೊಡ್ಡ ಮನುಷ್ಯ ಆಗೇ ಆಗ್ತೀನಿ ಅಂದಲ್ಲಿ ನಂಬಿಕೆ ಇದ್ದದ್ದರಿಂದ ಇನ್ನೂರು ಪೇಜಿನ ಹದಿನಾರು ಪುಸ್ತಕಗಳು ಅಟ್ಟದ ಮೇಲಿನ ಪೆಟ್ಟಿಗೇಲಿ ಭದ್ರವಾಗಿತ್ತು.

ನನ್ನಾಕೆ ಕಣ್ಣಿಗೆ ಅದ್ಯಾವುದೋ ವಿಷಮ ಗಳಿಗೆಯಲ್ಲಿ ಈ ಹದಿನಾರು ಪುಸ್ತಕಗಳು ಅಂದರೆ ಮೂರುಸಾವಿರದ ಇನ್ನೂರು ಪುಟಗಳು ಬೀಳಬೇಕೇ? ಸಮಯ ಸಿಕ್ಕಿದಾಗ ಯಾವುದಾದರೂ ಈ ಪುಸ್ತಕ ತೆರೆದಿಡಿದು 'ರೀ ಸುಮಿತ್ರಾ ಯಾರ್ರೀ?' ಅಂತ ಕೇಳುವುದು. ಸುಮಿತ್ರಾ ಯಾರು ಅಂತ ನಾನು ತಲೆಕೆರೆದುಕೊಂಡು ನೆನಪಿಸಿಕೊಳ್ಳೋ ಅಷ್ಟರಲ್ಲಿ ಪ್ಲಾಜಾ ಥಿಯೇಟರಿನಲ್ಲಿ ಜಿ ಮೂವತ್ತೆರಡು ಜಿ ಮೂವತ್ತೊಂದು ನಂಬರಿನ ಸೀಟಿನಲ್ಲಿ ಇವಳ ಸಂಗಡ ಯಾವುದೋ ಸಿನಿಮಾ ನೋಡಿದೀರಾ ಅವಳು ಯಾರೂಂತ ನೆನಪಿಲ್ಲವೇ? ಅಂತ ಜಗಳ ಆರಂಭಿಸುವುದೂ... ಹೀಗೆ ಆಲ್‌ಮೋಸ್ಟ್ ತಿಂಗಳಿಗೆ ನೂರು ಜಗಳಗಳು ಆಗಲು ಆರಂಭವಾದವು. ಈ ಹದಿನಾರು ಪುಸ್ತಕಗಳನ್ನೂ ಸುಟ್ಟು ಬೂದಿಮಾಡಿ ನೀರಿನಲ್ಲಿ ಕಲಸಿ ರಸ್ತೆಗೆ ಸುರಿದುಬಿಡೋಣ ಅಂದರೆ ಅದನ್ನು ಜೋಪಾನವಾಗಿ ಅಲ್ಲೆಲ್ಲೋ ಸೀಕ್ರೆಟ್ ಸ್ಥಳದಲ್ಲಿರಿಸಿಕೊಂಡಿದ್ದಳು. ಸರಿ ಅವಳು ಕೇಳೋ ಹೆಸರಿನ ಬಗೆಗೆ ಒಂದು ಸಮಾಜಾಯಿಸಿ ನೀಡಿದರೆ ಅದರಿಂದ ಅವಳಿಗೆ ಸಮಾಧಾನವಿಲ್ಲ. ಬರೀ ಪಿಕ್ಚರ್ ನೋಡಿದೀನಿ ಅಷ್ಟೇ ಕಣೇ.. ಅಂದರೆ ಬರೀ ಪಿಕ್ಚರ್ ಅಂದಿರಾ? ಅವಳನ್ನು ಕೈ ಹಿಡಿದುಕೊಂಡಿರೋ ಇಲ್ಲವೋ ಅವಳ ಕೆನ್ನೆ ಸವರಿರಲಾರರೇ? ಅವಳ ಪಕ್ಕ ಕೂತಿದ್ದೀರಿ ಅಂದರೆ ಅವಳ ಭುಜ ನಿಮಗೆ ತಗುಲಾದರೂ ಇರುತ್ತೆ... ಈ ತರಹ ಸ್ಪೆಕ್ಯುಲೇಷನ್‌ಗಳು. ಮೂರು ನಾಲ್ಕು ವರ್ಷ ಈ ತರಹದ ಗ್ರಿಲ್ಲಿಂಗ್ ನಡೆದ ನಂತರ ಗ್ರಿಲ್ಲಿಂಗ್‌ಗಳಿಗೆ ಅಡ್ಜೆಸ್ಟು ಆದೆ. ಗ್ರಿಲ್ಲಿಂಗ್‌ಗಳಿಗೆ ತಪ್ಪಿಸಿಕೊಳ್ಳೋಕ್ಕೇ ಅಂತಲೇ ಸಾಹಿತ್ಯ ಸಾಹಿತ್ಯ ಅಂತ ತಲೆಕೆಡಿಸಿಕೊಂಡೆ. ಮನೆಯನ್ನು ತಡವಾಗಿ ಸೇರಲು ಆರಂಭಿಸಿದೆ. ಇದುಬಿಡಿ, ನನ್ನ ಆತ್ಮಚರಿತ್ರೆ ಬರೆಯೋ ಬೇಕೂಫ ಗಮನಿಸಬೇಕಾದ ವಿಷಯ ನಿಮಗೆ ಹೇಳಿ ನಿಮಗೇಕೆ ಬೇಸರಪಟ್ಟಿಸಲಿ? ನನ್ನಾಕೆ ಹವಾಲಾ ಅಂದರೇನು ಅಂತ ಕೇಳಿದಳು ಅಂದೆನಲ್ಲಾ ಅದಕ್ಕೆ ಸೇರಿದ ಹಾಗೆ ಈ ಕತೆಯನ್ನು ಹೇಳಿದ್ದು. ಇನ್ನು ನನ್ನ 'ಕತೆ' ಮುಂದುವರಿಸಲೇ?

'ಹವಾಲಾನೇ?' ಅಂತ ಕೇಳಿ ಕಾಫಿ ನೆತ್ತಿಗೆ ಏರಿಸ್ಕೊಂಡೆ. ಎರಡು ನಿಮಿಷ ಕೆಮ್ಮಿ ಸುಧಾರಿಸಿಕೊಂಡೆ. ಈ ಎರಡು ನಿಮಿಷದಲ್ಲಿ 'ಹವಾಲಾ' ಅನ್ನೋ ಹುಡುಗಿ ನನ್ನ ಸಂಗಡ ಕಾಲೇಜ್ನಲ್ಲಿ ಇದ್ದಳೇ ಅಂತ ನೆನಸಿಕೊಂಡೆ. 'ಹವಾಲಾ' ಅನ್ನೋಳು ಇರಲಿಲ್ಲ. 'ಹವಳ ದರ್ಶನಿ' ಅಂತ ಒಬ್ಬಳು ಇದ್ದಳು. ಅವಳ ಹೆಸರೇನಾದರೂ ನನ್ನ ಡೈರಿಯಲ್ಲಿ 'ಹವಾಲಾ' ಅಂತ ಬರೆದಿದೇನೋ? 'ಹವಾಲಾನೇ? ಯಾರವಳು?' ಅಂದೆ.

'ಹವಾಲಾನೇ ಯಾರೇ ಅವಳು?' ಅಂತ ಸ್ಪಷ್ಟೀಕರಿಸಿದೆ. 'ಯಾರವಳು? ಒಳ್ಳೇ ಯಾವಾಗಲೂ ಅವಳು ಇವಳು ಅಂತ ಚಿಂತೆ ನಿಮಗೆ...' ಅಂತ ಆರಂಭವಾಯಿತು. ಇವತ್ತು ಯಾಕಾದರೂ ಬೇಗ ಮನೆ ಸೇರಿದೆ ಅನ್ನೋ ಅಷ್ಟರಲ್ಲಿ ಸಂಭಾಳಿಸಿಕೊಂಡಳು "ಅಲ್ರೀ ಹವಾಲಾ ದಂಧೆನಲ್ಲೋ ಹಗರಣದಲ್ಲೋ ದೇಶದ ರಾಜಕಾರಣಿಗಳು ಸಿಕ್ಕಿಹಾಕ್ಕೊಂಡು ಕೆಲವು ಮಂತ್ರಿಗಳು ಪದತ್ಯಾಗ ಮಾಡಿದ್ದಾರಂತಲ್ರೀ..." ಅಂತ ವಿವರಣೆ ನೀಡಿದಳು. ಸರಾಗವಾಗಿ ಎರಡು ನಿಮಿಷ ಉಸಿರಾಡಿದೆ. ಬೆಟ್ಟದಹಾಗೆ ಬಂದದ್ದು ಕಳ್ಳಿಗಿಡದ ಹತ್ತಿ ಹಾಗೆ ಹಾರಿ ಹೋಗಿತ್ತು! ಓ ಆ ಹವಾಲಾನೇ? ಪುಢಾರಿಗಳು ಸಿಕ್ಕಸಿಕ್ಕ ಕಡೆ ಎಲ್ಲಾ ಲಾವ್‌ಲಾವ್ ಅಂತ ನಾಲಿಗೆ ಚಾಚ್ತಾರಲ್ಲಾ ಅಂತ ಒಂದು ದಂಧೆ ಅದು. ಲಾವ್‌ಲಾವ್ ಅಂತ ಕೇಳೋಕ್ಕೆ ಚೆನ್ನಿರುಲ್ಲ ಬೇಜಾರು ಮರ್‍ಯಾದೆಗೆ ಕಡಿಮೆ ಅಂತ ಹವಾಲಾ ಅಂತ ಹೆಸರು ಮಡಗಿದಾರೆ ಅಂದೆ. ಲಾವ್‌ಲಾವ್ ಅಂಬೋರು ಒಂದೊಂದುಸಲ ನೀರು ಕುಡಿಲೇಬೇಕಂತೆ. ಲಾವ್ ಅಂಬೋದು ಉಪ್ಪು ಅಂದರೆ ನೀರು ಅಂಬೋದು ಹವಾಲಾನೇ? ☺



ಅಯ್ಯೋ, ಕೊಡ್ರಿ ಇಲ್ಲಿ; ಮಹಾ ಹವಾಲ ಕೊಟ್ಟಾಗೆ ಆಡ್ತೀರಲ್ಲ..?

ವಿವಿಧ ವಿನೋದಾವಳಿ

ಸುಶೀಲಾ ಸೂರ್ಯನಾರಾಯಣ

ವಿವಿಧ ವಿನೋದಾವಳಿ ಕಾರ್ಯಕ್ರಮಗಳನ್ನು ನೀವು ಶಾಲಾ ಕಾಲೇಜು ವಾರ್ಷಿಕೋತ್ಸವದಲ್ಲೋ ಬೇರೆ ಯಾವ್ದಾದ್ರೂ ಸಮಾರಂಭಗಳಲ್ಲೋ ನೋಡಿದ್ದೀರಿ ತಾನೆ? ಆದ್ರೆ ಕೇಳಿದ್ದೀರಾ? ಕೇಳ್ಬೇಕಾದ್ರೆ ನಮ್ಮನೆಗೆ ಬನ್ನಿ. ಟೇಪ್ ರಿಕಾರ್ಡ್‌ರ್ ತೊಗೊಂಡು ಯಾವ್ದಾದ್ರೂ ಕ್ಯಾಸೆಟ್ ಒಳಗೆ ತಳ್ಳಿ ಸ್ವಿಚ್ ಆನ್ ಮಾಡಿ ಕಣ್ಣು ಮುಚ್ಚಿ ಕೂತ್ಬಿಡಿ. ಕಾರ್ಯಕ್ರಮ ಪ್ರಾರಂಭ ಆಯ್ತು. ಅಭೇರಿ ರಾಗದಲ್ಲಿ 'ನಗುಮೋಮು' ಶುರುವಾಗಿದೆ. ಪ್ರಾರ್ಥನೆ ಅಂದ್ಕೊಳಿ. ಮೈ ಮರೆತಿದ್ದೀರಿ. 'ಖಗರಾಜ' ಗಗನಕ್ಕೇರಿದಾಗ ಧಪ್ ಅಂತ ನಿಮ್ಮನ್ನು ಕೆಳಗೆ ತಳುತ್ತ ಕುದುರೆ ಕೆನೆಯುವ ಶಬ್ದ. 'ಇದೇನು ನಾನು ಎಲ್ಲಿದ್ದೀನಿ' ಅಂತ ಯೋಚಿಸಿ ಸುಧಾರಿಸಿಕೊಳ್ಳುವುದರೊಳಗೆ ಬೆಕ್ಕು ಮಿಯಾಂ ಮಿಯಾಂ ಅನ್ನತ್ತೆ, ರೈಲು ಕೂ ಅಂದುಕೊಂಡು ಚುಕುಬುಕು ಓಡತ್ತೆ. ಇದೆಲ್ಲ ಯಾರೋ ಯಾವುದೋ ಸಮಾರಂಭದಲ್ಲಿ ಮಾಡಿದ ಮಿಮಿಕ್ರಿ. ಬ್ಯೂಟಿಫುಲ್, ವಂಡರ್‌ಫುಲ್ ಅಂತ ವಿವರಣೆ ಬೇರೆ ಮಧ್ಯೆಮಧ್ಯೆ. ನೀವೂ ಕೂಡ 'ವ್ಹಾ, ಇಷ್ಟು ಚೆನ್ನಾಗಿ ಮಿಮಿಕ್ರಿ ಯಾರೋ ಮಾಡಿದ್ದು' ಅಂತ ಮೆಚ್ಚಿಗೆ ಸೂಚಿಸಿ 'ಇನ್ನೂ ಏನೇನು ಮಾಡಿದಾರೋ ಕೇಳೋಣ ಅಂತ ಅಂದುಕೊಳ್ಳುವಷ್ಟರಲ್ಲಿ 'ಪಿಲುವಕುರಾ ಅಲುಗಕುರಾ.....' ಅಂತ ತೆಲುಗು ಸಿನಿಮ ಹಾಡು ಶುರುವಾಗತ್ತೆ. ಅದು ಎರಡು ಸಾಲು ಆಗೋದ್ರೊಳಗೆ ಸಂಗೀತ ದಿಗ್ಗಜರಿಂದ ಹಿಂದೂಸ್ಥಾನಿ ಶೈಲಿಯಲ್ಲಿ ದಾಸರ ಪದ ಎರಡು ಸಾಲು, ಬಸವಣ್ಣನವರ ವಚನ ಎರಡು ಸಾಲು.... ಎಲ್ಲಾ ಕಲಸು ಮೇಲೋಗರ. 'ಛೆ ಈ ಬದಿ ಸರಿಯಲ್ಲ' ಅಂತ ಇನ್ನೊಂದು ಬದಿ ತಿರುಗಿಸಿ ಹಾಕಿದರೆ 'ಯಾವ ಜನ್ಮದ ಮೈತ್ರಿ ಈ ಜನ್ಮದಲಿ ಬಂದು' ನಿಮ್ಮನ್ನು ಸೂರೆಗೊಳ್ಳುತ್ತೆ. ಇದನ್ನಾದ್ರೂ ಕೇಳೋಣ ಎಂದು ಕುರ್ಚಿ ಹಿಂದಕ್ಕೆ ಒರಗಿ ಎರಡು ಕೈಯನ್ನು ತಲೆ ಹಿಂದಕ್ಕೆ ಮಡಚಿ ವಿರಾಮಾಸನದಲ್ಲಿ ಕೂತು ಕಣ್ಣುಮುಚ್ಚಿ ತನ್ಮಯರಾಗೋದ್ರೊಳಗೆ 'ಚುಚಾಂ ಬಯಯಯಂ ವಿಚುಂ' (ಶುಕ್ಲಾಂ ಭರಧರಂ ವಿಷ್ಣುಂ) ಅಂತ ತೊದಲು ಮಾತಿನ ಪುಟ್ಟ ಮಗುವಿನ ದನಿ ಕೇಳತ್ತೆ. ನಿಜ. ಮೈ ಪರಚಿಕೊಳ್ಳೋ ಹಾಗಾಗತ್ತೆ. ಸ್ವಲ್ಪ ತಾಳ್ಮೆ ತಂದುಕೊಂಡು ಕ್ಯಾಸೆಟ್ ಅನ್ನು ಮುಂದೆ ಓಡಿಸಿನೋಡಿ'. ಬಾರಯ್ಯ ಮಮಬಂಧು ಜೀವನ ಪಥದೊಳಾಗು' ಅಂತ ಯಾವ ಜನ್ಮಕ್ಕೆ ಮಂಗಳ ಹಾಡ್ತಾ ಇರತ್ತೆ. ಅದು ಮುಗಿಯುತ್ತಿದ್ದಂತೆ 'ಚೌದವೀ ಕ ಚಾಂದ್' ಪ್ರಾರಂಭ ಆದಾಗಲಂತೂ ನಿಮ್ಮ ಮನಸ್ಸಿಗೆ ಆಗುವ ಆನಂದ ಅಷ್ಟಿಷ್ಟಲ್ಲ. ಹುಣ್ಣಿಮೆ ಚಂದ್ರನಂತೆ ನಿಮ್ಮ ವದನಾರವಿಂದವೂ ಇಷ್ಟಗಲ ಅರಳತ್ತೆ. ಆದರೆ ಬಲೂನ್ ಟುಸ್ ಎನಲು ಹೆಚ್ಚು ಕಾಲ ಬೇಕಿಲ್ಲ 'ಈ ದೇಶ ಎಳಿಬೇಕಾದ್ರೆ ಯುವಶಕ್ತಿ ಜಾಗ್ರತವಾಗಬೇಕು. ಇದನ್ನೇ ಸ್ವಾಮಿ ವಿವೇಕಾನಂದರು ಹೇಳಿದ್ದು' ಎಂದು

ರಾಜಕೀಯ ಪುಡಾರಿಯೊಬ್ಬರ ವಾಕ್ ಪ್ರವಾಹ ಭೋರ್ಗರೆಯುತ್ತೆ. ಬೇರೆ ಯಾವ ಕ್ಯಾಸೆಟ್ ಹಾಕಿದರೂ ಇದೇ ಪಾಡು.

ಇಷ್ಟನ್ನು ಬೇಕಾದ್ರೆ ಮುನ್ನುಡಿ ಅಂದ್ಕೊಳ್ಳಿ. ಆದರೆ ಹಿನ್ನುಡಿ, ಪರಿವಿಡಿ ಎಲ್ಲಾ ಸೇರಿ ಹೋಯ್ತಲ್ವೆ? ಇನ್ನೇನು ಇದೆ ಹೇಳಲು? ಆದ್ರೂ ನಿಮ್ಮ ಕುತೂಹಲ ತಣೀಲಿಲ್ಲ. ಹೇಳ್ತೀನಿ ಕೇಳಿ.

ನಮ್ಮ ಯಜಮಾನರಿಗೆ ಒಂದು ತರ ರಸಿಕತೆ. ಅವರದೇ ಒಂದು ಹವ್ಯಾಸ. ಶಾಸ್ತ್ರೀಯ ಸಂಗೀತದ ಗಂಧ ಗೊತ್ತಿಲ್ಲ. ಆದ್ರೂ ಅವರಿಗಿಷ್ಟವಾದ, ಮೆಚ್ಚಿನ ಗಾಯಕರ ಸಂಗೀತ ಅಂದರೆ, ಸಂಗೀತ ಕಲಿತವರಿಗಿಂತಲೂ ತನ್ಮಯತೆಯಿಂದ ಕೇಳಿ ಆನಂದಿಸುತ್ತಾರೆ. ಇನ್ನು ಹಳೆ ಹಿಂದಿ ಕನ್ನಡ ಸಿನಿಮಾ ಹಾಡುಗಳಂತೂ ಸರಿಯೇ ಸರಿ. ಜೊತೆಗೆ ಅವರು ಹುಟ್ಟಿ ಬೆಳೆದ ಹಳ್ಳಿ ರಾಜ್ಯದ ಗಡಿ ಪ್ರದೇಶ. ಹಾಗಾಗೆ ತೆಲಗು ಖಯ್ಯಾಲಿ ಬೇರೆ. ಹಳೇ ತೆಲುಗು ಸಿನಿಮಾ ಹಾಡುಗಳೂ ಅವರನ್ನು ಮೋಡಿ ಮಾಡತ್ತೆ. ಎಲ್ಲವರ ಜೊತೆಗೆ ಮಕ್ಕಳು ಅಂದರೆ ಪ್ರಾಣ. ತಂಗಿ, ತಮ್ಮಂದಿರ ಮಕ್ಕಳು, ಅಣ್ಣಂದಿರ ಮೊಮ್ಮಕ್ಕಳು ಯಾರೇ ಮನೆಗೆ ಬರಲಿ ಅವರ ಬಾಲಭಾಷೆ, ಹಾಡು, ಕಥೆ, ಶ್ಲೋಕ ಎಲ್ಲವನ್ನೂ ಧ್ವನಿಮುದ್ರಿಸಿಕೊಳ್ತಾರೆ. ಮಕ್ಕಳನ್ನು ಸಂದರ್ಶನ ಮಾಡೋದು ಬೇರೆ. 'ನಿನ್ನ ಹೆಸರೇನು ಪುಟ್ಟಿ' ಇವರ ಪ್ರಶ್ನೆಗೆ ಎರಡು ವರ್ಷದ ಮಗು 'ತುಮನ' ಅಂದರೆ ಇವರು ಬಾಲಭಾಷೆ ಅನುಸರಿಸುತ್ತಾ 'ಸರಿ ತುಮನಾ' 'ನಿಮ್ಮಣ್ಣ ಯಾವ ಸ್ಕೂಲು', ಅದೇನೋ ಹೇಳತ್ತೆ. ಇವರಿಗೆ ಅರ್ಥ ಆಗಲ್ಲ. ಆಗ ಸುಮನಳ ತಾಯಿ ಅದನ್ನು ಅರ್ಥೈಸಬೇಕು. ಇದೆಲ್ಲ ಧ್ವನಿ ಮುದ್ರಣ ಆಗ್ತಾ ಹೋಗತ್ತೆ. ಮನೆ ಮಂದಿ ಬಿಗಿ ಹಿಡಿದು ಕೇಳುತ್ತಿರಬೇಕು. 'ಏನಾದ್ರೂ ಮಾಡ್ಕೊಳ್ಳಿ ನಾನು ಅಡಿಗೆ ಮನೆ ಕೆಲಸ ನೋಡ್ತೀನಿ' ಅಂತ ಹೋಗಿ ಪಾತ್ರೆ ಗೀತ್ರೆ ಶಬ್ದ ಮಾಡಿದ್ರೆ, ಎಲ್ಲಿಲ್ಲದ ಸಿಟ್ಟು, ಬೈಸಿಕೊಳ್ಳಲಾರದೆ ಕೈಕಟ್ಟಿ ಕೂರಬೇಕು. ಇದೆಲ್ಲದರ ಜೊತೆಗೆ ಸಮೂಹ ಮಾಧ್ಯಮದಲ್ಲಿ ಬೇರೆ ಕೆಲಸ. ಯಾವುದೋ ಕಾರ್ಯಕ್ರಮದ ಯಾವುದೋ ತುಣುಕು, ಯಾವುದೋ ಭಾಷಣ ಮಧ್ಯೆಮಧ್ಯೆ ನುಸುಳಿ ಬಿಡತ್ತೆ.

ಈ ತರಹ ಹವ್ಯಾಸಕ್ಕೆ ಮನೇಲಿ ನೂರಾರು ಕ್ಯಾಸೆಟ್‌ಗಳನ್ನು ಇಟ್ಟುಕೊಂಡರೂ ಸಾಲದು. ಆದರೆ ಅವರ ಜೇಬು ಇದಕ್ಕೆ ಒಪ್ಪಿಗೆ ಕೊಡಲ್ವೆ ಅದಕ್ಕೇ ಈ ಅವಾಂತರ.

ಸ್ನಾನ ಮಾಡ್ತಾ ಇರ್ತಾರೆ, ಆಕಾಶವಾಣಿ ವಾಣಿಜ್ಯ ವಿಭಾಗದಲ್ಲಿ 'ದೋಣಿ ಸಾಗಲಿ ಮುಂದೆ ಹೋಗಲಿ' ಬರ್ತೀಕು ಬಚ್ಚಲಿನಿಂದಲೇ ಕೂಗ್ತಾರೆ 'ಬೇಗ ರೆಕಾರ್ಡ್ ಮಾಡು ಯಾವ ಕ್ಯಾಸೆಟ್ ಆದ್ರೂ ಸರಿ' ಅಂತ ಮಗನಿಗೆ ಆದೇಶ. ಮೊದಲೆಲ್ಲಾ ಅವನೂ 'ಇದೇನಪ್ಪ ಅದೂ ಇಲ್ಲ ಇದೂ ಇಲ್ಲ, ಇದ್ಯಾವ ಸೀಮೆ ಕ್ಯಾಸೆಟ್ ಇಟ್ಕೊಳ್ಳೋ ರೀತಿ. ಮನೆಗೆ ಯಾರಾದ್ರೂ ಬಂದು ಕೇಳಿದ್ರೆ ಎಷ್ಟು ಅವಮಾನ' ಅಂತ ಕೂಗಾಡ್ತಿದ್ದ. ಆದ್ರೆ ದಿನ ಕಳೆದಂತೆ ಇದು ಕೈಬಿಟ್ಟ ಕೇಸು ಅಂತ ಅರ್ಥವಾಗೆ, ಇವರು ಬಚ್ಚಲಿನಿಂದಲೋ ಇನ್ನೆಲ್ಲಿಂದಲೋ ಕೂಗಿದಾಗ ಟೂ ಇನ್ ಒನ್ ಒಳಗೆ ಒಂದು ಕ್ಯಾಸೆಟ್ ತುರುಕಿ

ನಿರ್ಲಿಪ್ತತೆಯಿಂದ ತನ್ನ ರೂಮು ಸೇರ್ತಾನೆ. ಮಕ್ಕಳಿಗೆ ಬೇಕಾದ ಪಾಶ್ಚಾತ್ಯ ಸಂಗೀತ; ಟಾಪ್ ಟೆನ್‌ಗಳಿರುವ ಕ್ಯಾಸೆಟ್‌ಗಳೆಲ್ಲಾ ಇದೇ ಗತಿ ಕಂಡಿತು. ಈಗ ಮಕ್ಕಳು ತಮ್ಮದೇ ಕ್ಯಾಸೆಟ್ ಇಟ್ಟುಕೊಂಡು ತಮ್ಮ ರೂಮಿನ ಬೀರುವಿನಲ್ಲಿಟ್ಟು ಬೀಗ ಹಾಕ್ತಾರೆ. ಅಪ್ಪ ಮನೇಲಿಲ್ಲದಾಗ ಮೂರು ಬೀದಿಗೆ ಕೇಳೋ ಹಾಗೆ ಹಾಕ್ಕೊಂಡು ಕುಣೀತಾರೆ.

ಒಳ್ಳೆ ಮೆಚ್ಚಿನ ಹಾಡು ರೇಡಿಯೋದಲ್ಲಿ ಬಂತು ಅಂದ್ರೆ ಮನೆಯಲ್ಲಿ ಅವಸರ ಗಡಿಬಿಡಿ. ಶಥಪಥ ನಾಕು ಸಲ ಓಡಾಡಿ ಕ್ಯಾಸೆಟ್ ಒಳಗೆ ಏನಿದೆ ಅಂತ ನೋಡೋಕೂ ಸಮಯ ಇಲ್ಲದೆ ಯಾವುದೋ ಕ್ಯಾಸೆಟ್‌ನಲ್ಲಿ ಯಾವುದೋ ಹಾಡು ರೆಕಾರ್ಡ್ ಆಗತ್ತೆ. ಹಾಗಾಗಿ ಇವರ ಈ ಗಡಿಬಿಡಿ ಹವ್ಯಾಸದಿಂದ ಇವರೇ ಇಷ್ಟಪಡುವ ಹಾಡುಗಳು ಅದೆಷ್ಟು ಸಲ ರೆಕಾರ್ಡ್ ಆಗದ್ದೋ, ಅದೆಷ್ಟು ಸಲ ಅಳಿಸಿ ಹೋಗಿದ್ದೋ ದೇವರಿಗೇ ಗೊತ್ತು. ಮನಸ್ಸಿಗೆ ಬೇಜಾರಾದಾಗ, ಹುಷಾರಿಲ್ಲದಾಗ, ಕಡೇ ಪಕ್ಷ ತಲೆ ನೋವು ಬಂದಾಗಲೂ ಇವರಿಗೆ ರಾಮ ಬಾಣ ಈ ಕ್ಯಾಸೆಟ್‌ಗಳು. ಜ್ವರ ಬಂದು ನರಳ್ತಾ ಮಲಗಿರ್ತಾರೆ. 'ಕ್ಯಾಸೆಟ್ ತಂದು ಆ ಹಾಡು ಹಾಕು ಕೇಳ್ತಾ ಮಲಗಿರ್ತೀನಿ' ಅಂತಾರೆ. ಅಯ್ಯೋ ಅನ್ನತ್ತೆ. ಆದರೆ ಅವರಿಗೆ ಬೇಕಾದ ಹಾಡು ಹುಡುಕಿ ತಂದು ಹಾಕುವುದರೊಳಗೆ ನಮ್ಮ ತಾತ ಎದ್ದು ಬರ್ತಾರೆ. ನನಗೋ ಅಸಹನೆ ಜಾಸ್ತಿ. 'ನೀವೋ ನಿಮ್ಮ ಕ್ಯಾಸೆಟ್ಟೋ ಥತ್' ಅಂತ ರೇಗ್ತೀನಿ. 'ಇಲ್ಲ ಕಣೆ ಈ ಸಲ ಹುಷಾರಾದ ಮೇಲೆ ವ್ಯವಸ್ಥಿತವಾಗಿ ಇಡ್ತೀನಿ' ಅಂತ ಅಂತಾರೆ ಅಷ್ಟೆ. ಯಾವಾಗಲೋ ಸಮಯ ಸಿಕ್ಕಾಗ, ಸೋಮಾರಿತನ ಇಲ್ಲದಾಗ ಒಂದು ಗಂಟೆ ಕುಳಿತು ಒಂದೋ ಎರಡೋ ಕ್ಯಾಸೆಟ್ ಕೇಳಿ ಪಟ್ಟಿ ಮಾಡಿ, ಯಾವ ಯಾವ ಹಾಡಿವೆ, ಮತ್ತು ಏನೇನಿದೆ ಅಂತ ಚೀಟಿ ಅಂಟಿಸೋದ್ರೊಳಗೆ ಸಾಕಾಗ್ತಾರೆ. ಮತ್ತೆ ಈ ಕೆಲಸಕ್ಕೆ ಕೂಡುವುದು ಮತ್ಯಾವಾಗಲೋ. ಮೂರನೇ ದಿನವೇ ಗಡ್ಡ ಕೆರ್ಕೊತಾ ಇರೋವಾಗ ಒಳ್ಳೆ ಹಾಡು ಬರ್ತೇಕು, ರೇಜರ್ ಬದಿಗಿಟ್ಟು ಸೋಪ್ ಮೆತ್ತಿದ ಮುಖದಲ್ಲೇ ಪಂಚೆಗೆ ಕೈ ಒರೆಸಿಕೊಳ್ತಾ ಸಿಕ್ಕಿದ ಕ್ಯಾಸೆಟ್ ಎಳ್ಕೊಂಡು ರೆಕಾಡ್ ಮಾಡೇ ಬಿಡ್ತಾರೆ. ವಿವಿಧ ವಿನೋದಾವಳಿಗೆ ಕೊನೆಯೇ ಇಲ್ಲ.

ಉಳಿಸಿ!

ಮನುಜ ಕುಲದಲೀಗ
ಹುದುಗಿಹವು ಬಿರುಕುಗಳು
ದೀನ - ದಲಿತ - ಶ್ರೀಮಂತ!
ನಾಗರಿಕ - ಅನಾಗರಿಕ
ಜಾತಿ - ಕುಲ - ಮತ!

ಇವನೆಲ್ಲ ಅಳಿಸಿ,
ಮನುಜಕುಲ ಉಳಿಸಿ!

ರಾ. ಪ್ರ. ನಂ.

ಬ್ಯಾಟಲ್ ಆಫ್ ದಿ ಬಲ್ಜ್

ಅರುಣಾ ಆರ್. ಕಾರಂತ

ಒಂದನೆಯ ಪಾಣಿಪತ್ ಯುದ್ಧ, ಎರಡನೆಯ ಪಾಣಿಪತ್ ಯುದ್ಧ, ರಕ್ಕಸತಂಗಡಿ ಕಾಳಗ ಇವುಗಳ ಬಗ್ಗೆ ಸ್ಕೂಲ್ ಡೇಸ್‌ನಲ್ಲಿ ಓದಿದ್ದೂ ಒಂದು ನೆನಪು, ಆದ್ರ ಬ್ಯಾಟಲ್ ಆಫ್ ದಿ ಬಲ್ಜ್ ಅಂದ್ರ ಯಾವುದೇ ಹಿಸ್ಟಾರಿಕಲ್ ಬ್ಯಾಟಲ್ ಬಗ್ಗ ಅಲ್ಲ ನಾ ಹೇಳಿಕ್ಕ ಹೊಂಟಿದ್ದು ಆದ್ರ ಅದೂ ವರ್ತ್ ಮೇಕಿಂಗ್ ಹಿಸ್ಟರಿ ಅಂತೂ ಹೌದು.

ನಮ್ಮ ಗೋದುಬಾಯಿ ಇದ್ರು ಗುಂಡುಗುಂಡಗೆ..... ಹೂ ಮುಡಿದು ಹುಬ್ಬಳ್ಳಿಯ ಟೋಪತೆನಿ ಸೀರೆ ಉಟ್ಟರೆ, ಥೇಟ್ ಗುಂಡಮ್ಮನೇ, ಆದ್ರೇನು ಮಾಡೋದು ನೋಡೋರ ಕಣ್ಣಿಗಿಷ್ಟು.....! ಸುಮ್ಮ, ಕುಂದರ್‍ತ್ತಾರಾ ಯಾರಾದ್ರೂ 'ಡಬ್ಬಲ್ ಡೆಕ್ಕರ್, ಡುಮ್ಮಿ, ಡ್ರಮ್' ಅನ್ನೋರು! ಇಷ್ಟೇ ಅಲ್ಲ ದಪ್ಪಗೆ ಇರುವವರಿಗೇ ಅದೇನೋ ಬಿ.ಪಿ. ಅಂತೆ, ಹಾರಟ್(ಹಾರ್ಟ್) ಟೆರಿಬಲ್ ಅಂತೆ, ಸಕ್ಕರೆ ಕಾಯ್ಲೆ ಅಂತೆ ನೂರೆಂಟು ರೋಗ! ಜನರ ಬಾಯಲ್ಲಿ, ಟಿ.ವಿ.ಯಲ್ಲಿ ಕೇಳಿ, ನೋಡಿ ಗೋದೂಬಾಯಿನೂ ಮನಸ್ಸು ಮಾಡಿದ್ರು ಡಯಟ್ ಮಾಡ್ಲಿಕ್ಕೆ! ಅವ್ರ ಕನಸುಮನಸ್ನಲ್ಲೆಲ್ಲ ಒಂದೇ ದಿವ್ಸಕ್ಕೇ ಮಾಧುರಿ ದೀಕ್ಷಿತ್ ತರಹ ಆದ್ಹಂಗS, ಹ್ಯಾಂಗಾರ ಸ್ಲಿಮ್ಮಿ ಅನ್ನಿಸ್ಕೋಬೇಕು! ಯಾಕಂದ್ರ, ಗಂಡನ, ಅಗ್ರಿಮೆಂಟೇ ಹಾಂಗಿತ್ತು.... ಯಾವತ್ತೂ ಗಂಡನ ಅರ್ಧ ಅಂಗಿ ಆಗೇ ಇರ್‍ಬೇಕು, ಸ್ವಲ್ಪ ಹೆಚ್ಚಾದ್ರೂ 'ಡೈವೋರ್ಸ್'! ಅದಕS ಏನಾರS ಮಾಡ್ಬೇಕು ಇಲ್ಲಾಂದ್ರ ಇಲ್ಲಾಂದ್ರ ಗಂಡಾ ಅನ್ನೂ ಗಂಡಾಂತರ 'ಪುಷ್ಕಳ ಕಳಾವತಿ'ಯ ಸರ್ಚ್ ಅಥ್ವಾ ರಿಸರ್ಚ್ ಮಾಡ್ಲಿಕ್ಕೆ ದೇಶಾಂತರ ಹೋದ್ರೆ....!? ಏನಾSSರS ಮಾಡ್ಲೇಬೇಕು.

ಕಡಿಮೆ ತಿಂದು ಹೆಚ್ಚಿಗೆ ಕೆಲೋರಿ ಬರ್ನ್ ಮಾಡ್ಬೇಕು, ಟ್ರಿಮ್ ಲೇಡಿ ಇಮ್ಲಿ ಅಂದ್ಲು. ಸರಿ, ಮುಂಜಾನೆ ಕಪ್ಪು ಚಾ ಜೊತೆ ಎರಡು ಸ್ಲೈಸ್ ಬ್ರೆಡ್ಡು, ಮಧ್ಯಾಹ್ನವೂ ಅದೇ, ರಾತ್ರಿಯೂ ಅದೇ ವ್ಯತ್ಯಾಸ ಇಷ್ಟೆ. ಚಹಾದ ಬದ್ಲು ನೀರ್ ಮಜ್ಜಿಗೆ, ಎರಡೇ ದಿನಕ್ಕೆ ಸುಸ್ತು ಬಡಿದು ಬಿಟ್ಟರು. ಗೋದೂಬಾಯಿ ಎಕ್ಸೆರ್ಸೈಸ್ ಅಂತ ಸೈಕಲ್ ತುಳೀಲಿಕ್ಕೆ ಹೋದ್ರು; ಸೈಕಲ್ ಮುರೀತು; ಕಾಲೂನೂ ನೋಯ್ಲಿಕ್ಕ ಹತ್ತು. ಒಬ್ರಂದ್ರು 'ಹಸೀ ತರಕಾರಿ ತಿನ್ರಿ' ಸರಿ, ಮನೆಯಲ್ಲಿ ಎಲ್ಲರಿಗೂ ಪನಿಶ್‌ಮೆಂಟು ದನ ಮೆಂದಾಂಗ ಹಸಿರು ತರಕಾರಿ ತಿನ್ನುವುದು. 'ಊಟ' ಅಂದ್ರೆ ಎಲ್ರಿಗೂ ವಾಕರಿಕೆ ಸುರು ಆಯ್ತು. ಆದ್ರೆ ಆಯಿಸ್‌ಕ್ರೀಮು, ಚಾಕಲೇಟುಗಳನ್ನು ಬಿಡಲಿಕ್ಕಾಗಲಿಲ್ಲ. ಅವು ಇರೋದೇ ಹಾಗೆ. 'ಹೈಲಿ ಟೆಂಪ್ಟಿಂಗು' ಅಂದ್ರು ಗೋದೂಬಾಯಿಯ ಯಜಮಾನ್ರು. ಆದ್ರ ಗೋದೂಬಾಯಿ ಹ್ಯಾಂಗ ಇದ್ರೋ ಹಾಂಗೇ ಇದ್ರು.

'ಅಮ್ಮಾ, ನಾಲ್ಗೆ ಕೆಟ್ಟೋಯ್ತು, ಏನಾರ ನಾಳೆ ಇಡ್ಲಿ ಅಥ್ವಾ ದೋಸೆ ಇಲ್ಲಾಂದ್ರ ನಾವೆಲ್ಲ

ಇನ್ನು ರೆಕ್ಕೆಯಿಲ್ಲದೆ ಹಾರೋ ಅಷ್ಟು ಹಗುರ ಆಗ್ತೀವಿ' ಹೂಂಕರಿಸಿದಳು ಮಗಳು ಸ್ಕಿಪ್ಪಿಂಗ್ ಮಾಡ್ತಾ! 'ನೀ ಬೇಕಾದ್ರ ಹಸೀ ಹಸೀ ಹಸಿರು ಸೊಪ್ಪು ಮೇಯ್ತಾ ಕುಂದ್ರು ಆತs!' ಮತ್ತೊಂದು ಮರಿ ಉದ್ಗರಿಸಿತು.

ಮಾರನೆಯ ದಿನ ಗೋದೂಬಾಯಿ ಬರಿ ಎರಡು ಇಡ್ಲಿ ತಿಂದ್ರು, ಬೆಣ್ಣೆ-ಚಟ್ನಿ ಜತೆ! ಎರಡೇ ಇಡ್ಲಿ!! ಆಲೂಗಡ್ಡೆ ಉಳ್ಳಾಗಡ್ಡಿ, ಬಟಾಣಿ, ಗರಮ್ ಮಸಾಲೆ ಹಾಕಿ 'ಘಂ' ಅಂತಿರೋ 'ಆಲೂಮಟರ್' ಜತೆ ಎರಡೇ ಇಡ್ಲಿ ಮತ್ತ ಯಾರಿಗೂ ಅಂದ್ರ ತಮಗೂ ತಿಳೀದ್ಹಂಗ ರುಚಿ ಹತ್ತ್ಯು ಅಂತ ಎರಡು ಇಡ್ಲಿ ತಿಂದ್ರು. ಮ್ಯಾಲಿಂದ ಅಪ್ರೂಪಕ್ಕಂತ ಕೆನೆಹಾಲು ಸಕ್ರಿ ಹಾಕಿದ್ದ ಚಾ ಎರಡs ಕಪ್ಪು (ಹಾಲು ಸಕ್ರಿ ಕಾಣದ ಕರಿ ಕಪ್ಪು ಚಾ ಮರತs ಬಿಟ್ಟಿದ್ರು, ಪಾಪ) ಕುಡ್ದು ಮ್ಯಾಲ ರಸಬಾಳೆಹಣ್ಣು ಎರಡು ತಿಂದ್ರು ಮಸಾಲೆ ಪಾನ್ ಮೆದ್ದರು ತೂಕ ನೋಡಿದ್ರು...... ನೋಡಿದ್ರs ಹೋದ್ವಾರ ಇಳಿದ ಎರಡು ಕೆ.ಜಿ. ಈ ವಾರ ನಾಲ್ಕು ಕೆ.ಜಿ. ಏರಿತ್ತು. ಏನಾರ ಮಾಡ್ಬೇಕಲ್ಲಾ! ಲಿಂಬೇಹಣ್ಣು, ಜೇನುತುಪ್ಪ ಸೇರಿಸಿ ತೆಗೆದುಕೊಳ್ಳುವುದು ಸ್ಥೂಲಕಾಯದವರು ನೀಳಕಾಯದವರಾಗಲು ಬೆಸ್ಟು ಯಾರೋ ಅಂದ್ರು. ಸರಿ ಒಂದು ಲಿಂಬೇಹಣ್ಣಿನ ರಸಕ್ಕೆ ಎರಡು ಚಮ್ಚ ಜೇನುತುಪ್ಪ ಬೆರೆಸಿ ಖಾಲಿಯ ಹೊಟ್ಟೆಯಲ್ಲಿ ಕುಡಿದದ್ದೇ ತಡವಿಲ್ಲದೆ 'ಸಂಕ್ಟ', 'ಸಂಕ್ಟ' ಅಂತ ಉರುಳ್ಯಾಡಿದ್ರು ಸೂಪರ್‌ಸಾಫ್ ಕ್ವಾಯರ್ ಗಾದಿ ಮ್ಯಾಲ. ತಮ್ ತೂಕ ನೋಡ್ತಾ. ಬಿ.ಪಿ. ಏರ್ತದನೋ ಅಂತ ಯೋಚಿಸ್ಕಂತ ಸೂರು ನೋಡ್ತ, ನೋಡ್ತ ಗುಮ್ ಆದ್ರು. ಇನ್ನೇನು ಮಾಧುರಿ ದೀಕ್ಷಿತ್, ಸುಷ್ಮಿತಾ, ಐಶ್ವರ್ಯ ರೈಗೆ ಸೈಡ್ ಹೊಡ್ದಂಗ!?'

'ಆದ್ರ ನಮ್ಮ ಭಾರತೀಯ ಸೌಂದರ್ಯ ಶಾಸ್ತ್ರದಲ್ಲಿ, ಶಿಲ್ಪಕಲೆಯಲ್ಲಿ ಎಲ್ಲೂ ಸ್ಕೆಲೆಟನ್ ಲೈಕ್ ಸ್ಟ್ರಕ್ಚರ್ಸ್ ಪ್ರಮುಖವಾಗಿ ಇಲ್ಲ. ಎಲ್ಲಾ ತುಂಬು ಮೈಕಟ್ಟಿನವರೇ ಇರೋದು, ಪೃಥ್ವಿ ಏನಾರ ಕಡ್ಡಿ ಹಾಂಗ ಇರ್ಲಿಕ್ಕs ಕಲ್ಪಿಸಲಿಕ್ಕಾರ ಸಾಧ್ಯನs, ಗುಂಡಗೆ ಸ್ವಲ್ಪ ಅಂಡಾಕಾರದಲ್ಲಿರೋದು ಪೃಥ್ವಿ! ಬೇಲೂರು, ಬೇಲೂರಿನ ಶಿಲಾಬಾಲಿಕೆಯರು ಎಷ್ಟು ಕಾವ್ಯ, ನೃತ್ಯ, ನಾಟಕಗಳಿಗೆ ಸ್ಫೂರ್ತಿಯಾಗಿಲ್ಲ!? ಅವರ್‍ಯಾರೂ ಬೆದರುಬೊಂಬೆಗಳಂತಿರಲಿಲ್ಲ. ಸ್ಲಿಮ್ಮು, ಸ್ಲಿಮ್ಮೇಡುಗಳೆಲ್ಲಾ ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವ ಅಂದ್ರು ಸಪೂರ-ಸುಬ್ಬಕ್ಕ! ಅವ್ರಿಗೇನು ಗೊತ್ತು ನಾಲ್ಕು ಸುತ್ತು ಹೆಚ್ಚಿದವರ ಫಜೀತಿ! ಜುಜುಬಿ ಬಸ್ನೋರೂ 'ಡಬ್ಬಲ್‌ಸೀಟ್‌ಗೆ ಸೀಟ್ ಇಲ್ಲಾ' ಅಂತ ಮೂತಿ ತಿರುವ್ತೋದು!'' ಹಂ ಅಂತ ನಿಡುಸುಯ್ದರು ಗೋದೂಬಾಯಿ.

ಮಧ್ಯಾಹ್ನ ಮನಿಗ ಬಂದ ಮಗ ಅಂದ, 'ಯಾಕ ಯೋಚಿಸ್ತಿ, ಹಸಿಯ ಕ್ಯಾರೆಟ್-ರಸ ದಿನ ಒಂದಕ್ಕೆ ಒಂದರ್ಧ ಲೀಟರ್‌ನ್ಹಾಂಗ ಒಂದೂವರೆ ತಿಂಗಳು ತಗೊಂಡ್ರ, 'ಹ್ಯಾಂಗಾಗ್ತಿ ಮತ್ತ ಬಳಕೂ ಬಳ್ಳಿ ಹಂಗs ಆಗ್ತಿ' ಯಾವ ಮಾಯದಿಂದಲೋ ಬಂದ ಗೋದೂಬಾಯಿಯ ಮನಿಯವ್ರು ಅಂದ್ರು. ಸುರು ಆಯ್ತು, ಮಾರನೇಯದಿನ ಬೆಳಗಿನಿಂದ ಕ್ಯಾರೆಟ್ಟಿನ ಪಥ್ಯ, ಕೇಸರಿಗೆಂಪಿನ ಕ್ಯಾರೆಟ್ಟುಗಳನ್ನು ತೆಗೆದುಕೊಂಡು ಚೆನ್ನಾಗಿ ತೊಳೆದೂ ತೊಳೆದೂ ಮತ್ತೂ ಕೆಂಪಗಾಗಿಸಿ ಮೇಲಿ ಸಿಪ್ಪೆ, ತೊಟ್ಟು ತೆಗೆದು ಸಣ್ಣಗೆ

ತುರಿದು ಮಿಕ್ಸಿಯಲ್ಲಿ ನುಣ್ಣಗೆ ಅರೆದು ನೋಡ್ತಾ, ನೋಡ್ತಾ ಖುಷಿ ಪಡೂ ಹಾಂಗಿದ್ದ ಗೋಲ್ಡನ್ ಕಲರ್ಡ್ ಕ್ಯಾರೆಟ್ ರಸ ಕುಡಿಯೋದ್ದೆಂಗ! ಒಂದಿನ ಸಕ್ಕರೆ ಹಾಕಿ, ಒಂದಿನ ಉಪ್ಪು ಖಾರ ಹಾಕಿ ಮೆಲ್ಲುವುದು! ಒಂದಿನ ಹಾಗೆಯೇ ಕುಡಿಯಲು ಹೋಗಿ ಬೇವಿನ ಕಹಿ ಕುಡಿದಂತೆ ಮುಖ ಮಾಡಿದ್ರು. ಒಂದಿನ ಅದನ್ನ ಕುಡಿಯೋದು ಅಂದ್ರs ಎಲ್ಲರ ಮೇಲೇನೋ ಅನುಗ್ರಹ ಮಾಡಿದಂತೆ ಮಾಡಿದ್ರು! ಒಟ್ಟಾರೆ ಪರಿಣಾಮ ಮಾತ್ರ ಸೊನ್ನೆ. ಜೊತೆಯಲ್ಲಿ ಜಾಗಿಂಗು, ಎರೋಬಿಕ್ ಎಕ್ಸರ್ಸೈಸ್ ಮಾಡಿ ಮೈ-ಕೈ ನೋವು ಮಾಡಿಕೊಂಡಿದ್ದs ಬಂತು. ಬ್ಯಾಟಲ್ ಆಫ್ ದಿ ಬಲ್ಜ್ ನಿಲ್ಲಿಲ್ಲ, ನಿಲ್ಲೊಹಂಗs ಇಲ್ಲ. ''ಏ ಗೋದೂ, ಗೋದೀ ಈವತ್ತಿನ ತಿಂಡಿ ಏನs? ಕ್ಯಾರೆಟ್ ಹಲ್ವಾನೋ, ಗೋದಿ ಹಲ್ವಾನೋ?'' ಗೋದೂಬಾಯಿಯ ಮನಿಯಮ್ರು ಕೇಳಿದ್ರು. ಹಿಂಗಾದ್ರ ಬ್ಯಾಟಲ್ ಆಫ್ ದಿ ಬಲ್ಜ್ ನಿಲ್ಲೋದು....... ನಿಲ್ಲೋದ್ದೆಂಗ?! ☺



ಇನ್ನೊಂದು ಸಲಾ ಆ ಸೇಲ್ಸ್‌ಗರ್ಲ್ ಬಂದರೆ ಹೀಗೇ ನಿಂತ್ಕೊ

ಯಶಸ್ಸಿಗೆ ಕಾರಣ

ಸಾ. ಕೃ. ಪ್ರಕಾಶ

ಭಾರತಿಗೆ ಕನ್ನಡ ಬರಲ್ಲಾಂತಲ್ಲ. ಶಾಲಾಕಾಲೇಜುಗಳಲ್ಲಿ ಅಧಿಕೃತವಾಗಿ ಓದಿರಲಿಲ್ಲ ಅಷ್ಟೆ. ಕಥೆ ಕಾದಂಬರಿಗಳನ್ನು ಕದ್ದು ಓದಿದ್ದಳು. ಹಿರಿಯರ ದೃಷ್ಟಿಯಲ್ಲಿ ಓದಬಾರದ ಪುಸ್ತಕಗಳನ್ನೂ ಪಠ್ಯಪುಸ್ತಕದಲ್ಲಿಟ್ಟುಕೊಂಡು ಓದಿದ್ದೂ ಉಂಟು. ಅವಳಪ್ಪ ಇಂಗ್ಲೀಷ್ ಪ್ರೊಫೆಸರ್ ಆಗಿದ್ದರಿಂದ ಕಾನ್ವೆಂಟಿನಲ್ಲಿ ಓದುವುದು ಅನಿವಾರ್ಯವಾಗಿತ್ತು. ಹೀಗಾಗಿ ಅವಳು 'ಹಾಯ್' ಸಂಸ್ಕೃತಿಯಲ್ಲೇ ಬೆಳೆದವಳು. ಅವರ ಮನೆಯಲ್ಲಿ ಲಂಚ್, ಡಿನ್ನರ್ ಮಾಡುತ್ತಿದ್ದರೇ ವಿನಹ ಊಟ ಮಾಡುತ್ತಿರಲಿಲ್ಲ. ಅಂತಹವಳು ಒಂದು ವರ್ಷದಲ್ಲಿ, ಒಂದೇ ಒಂದು ವರ್ಷದಲ್ಲಿ ಇಪ್ಪತ್ತೈದು ಕಾದಂಬರಿ ಬರೆದಳೆಂದರೆ ಆಶ್ಚರ್ಯವಾಗುವುದಿಲ್ಲವೆ? ಅದೂ ಪಂಡಿತ ಪಾಮರರೆಲ್ಲಾ ಮೆಚ್ಚುವಂತಹ ಕಾದಂಬರಿಗಳು.

ಮಗಳು ಕನ್ನಡದಲ್ಲಿ ಬರೆದುದು ಸ್ವಲ್ಪ ಅಸಮಾಧಾನಕ್ಕೆ ಕಾರಣವಾಗಿದ್ದರೂ ಭಾರತಿಯ ಅಪ್ಪ ಮಗಳ ಅದ್ಭುತ ಯಶಸ್ಸಿಗೆ ತಾನೇ ಕಾರಣನೆಂದು ದೃಢವಾಗಿ ನಂಬಿದ್ದರು. ತಮ್ಮಲ್ಲಿನ ಸುಪ್ತ ಪ್ರತಿಭೆ ಮಗಳಲ್ಲಿ ಹೊರಹೊಮ್ಮಿದೆಯೆಂದು ಬೀಗಿದ್ದರು. ಪ್ರಾಣಿಶಾಸ್ತ್ರದಲ್ಲಿ ಬಹಳ ಹಿಂದೆಯೇ ಪದವಿ ಪಡೆದಿದ್ದ ಭಾರತಿಯ ಅಮ್ಮನಿಗೆ ಮಗಳ ಯಶಸ್ಸಿಗೆ ತಾನೇ ಕಾರಣನೆಂಬುದರಲ್ಲಿ ಯಾವ ಸಂಶಯವೂ ಇರಲ್ಲಿಲ್ಲ. ಯಾರಾದರೂ ಬಡಪಾಯಿಗಳು ಜೀನ್ಸ್ ಬಗ್ಗೆ ಗಂಟೆಕಟ್ಟಲೆ ಕೊರೆದು ತಾವಲ್ಲದೆ ಬೇರೆ ಯಾರೂ ಕಾರಣರಾಗಲು ಸಾಧ್ಯವೇ ಇಲ್ಲವೆಂದು ನಿರೂಪಿಸುತ್ತಿದ್ದರು. ಭಾರತಿ ಬರೆಯಲು ಪ್ರಾರಂಭಿಸಿದ್ದೇ ಮದುವೆಯಾದ ಮೇಲೆ. ಅಂದ ಮೇಲೆ ಭಾರತಿಯ ಯಶಸ್ಸಿಗೆ ತಂದೆ-ತಾಯಿ ಹೇಗೆ ತಾನೆ ಕಾರಣರಾಗಲು ಸಾಧ್ಯ. ತಮ್ಮಿಂದಲೇ ಅವಳಿಗೆ ಸ್ಫೂರ್ತಿ ಸಿಕ್ಕಿರುವುದೆಂದು ಅವಳ ಮಾವನ ಅಂದರೆ ಅವಳ ಗಂಡ ಭಾಸ್ಕರನ ಅಪ್ಪನ ಖಚಿತವಾದ ಅಭಿಪ್ರಾಯ. ಭಾಸ್ಕರನ ಅಮ್ಮ ಅವನ ಮದುವೆಯ ಮೊದಲೇ ಸ್ವರ್ಗವಾಸಿಗಳಾಗಿ ಹೋಗಿದ್ದರಿಂದ ಭಾರತಿಯ ಯಶಸ್ಸಿನಲ್ಲಿ ಆಕೆ ಕ್ಲೈಮ್ ಮಾಡಲು ಸಾಧ್ಯವಾಗಿರಲಿಲ್ಲ. ಹೀಗೆ ಎಲ್ಲರೂ ತಮ್ಮ ಕ್ಲೈಮ್ ಮಂಡಿಸುತ್ತಿದ್ದರು ಭಾಸ್ಕರನೊಬ್ಬನನ್ನು ಬಿಟ್ಟು. ಅವನೊಬ್ಬ ಮಾತ್ರ ನಿರ್ಲಿಪ್ತ. ಹೆಂಡತಿಯೇನಾದರೂ ಮಾಡಿಕೊಳ್ಳಲಿ. ತನ್ನನ್ನು ಮನೆಗೆ ಬೇಗ ಬಾ ಎಂದು ಬಲವಂತ ಮಾಡದಿದ್ದರೆ ಸರಿ ಎಂದು ನಿಶ್ಚಿಂತನಾಗಿದ್ದ.

ಭಾರತಿಯ ತಾಯಿಯ ಸೋದರಮಾವನ ಹೆಂಡತಿ ತಮಿಳುನಾಡಿನವರಾದ್ದರಿಂದ ಭಾರತಿಯ ಯಶಸ್ಸಿಗೆ ತಾವೇ ಕಾರಣರೆಂದು ನಂಬಿದ ತಮಿಳುನಾಡಿನ ಮಕ್ಕಳು ಭಾರತಿಯನ್ನು ಕರೆಸಿ ಸನ್ಮಾನ ಮಾಡಿಯೇಬಿಟ್ಟರು. ಅವರು ಮಾಡಿದ ಮೇಲೂ ಕನ್ನಡಿಗರು ಸುಮ್ಮನಿರಲು ಹೇಗೆ ತಾನೇ ಸಾಧ್ಯ. ಇವರೂ ಸನ್ಮಾನ ಏರ್ಪಡಿಸಿಯೇ ಬಿಟ್ಟರು. ಸಾಹಿತಿಗಳಿಗೆ ಸನ್ಮಾನವಾದರೂ ರಾಜಕಾರಣಿಯೊಬ್ಬರು

ಅಧ್ಯಕ್ಷತೆ ವಹಿಸಬೇಕಾದುದು ಕರ್ನಾಟಕದ ಸಂಪ್ರದಾಯವಾದ್ದರಿಂದ ಮಂತ್ರಿಗಳೇ ಬಂದಿದ್ದರು. ಮಂತ್ರಿಗಳು ಬಂದ ಮೇಲೆ ದೂರದರ್ಶನದವರು ಬರದೆ ಇರಲು ಹೇಗೆ ಸಾಧ್ಯ. ಭಾರವಾದ ಭಾಷಣಗಳ ನಂತರ ಭಾರತಿಗೆ ಭಾರವಾದ ಹಾರ ಹಾಕಿಯೇ ಸನ್ಮಾನಿಸಲಾಯಿತು. ಅವಳ ಗಂಡಿಗೂ ಒಂದೆಳೆ ಹಾರ ಹಾಕಬೇಕೆಂಬ ಅಭಿಪ್ರಾಯ ಇತ್ತು. ಆದರೆ ಹಾರಕ್ಕಾಗಿ ಕಾದ ಕೊರಳುಗಳ ಸಂಖ್ಯೆ ಬಹಳ ಹೆಚ್ಚಿದ್ದರಿಂದ ಆ ಯೋಜನೆ ಕೈಬಿಡಲಾಯಿತು.

ಕಾರ್ಯಕ್ರಮದ ನಂತರ ಟಿ.ವಿ. ಕ್ಯಾಮರಾ ಇನ್ನೂ ಇದೆಯೆಂದು ಖಚಿತಪಡಿಸಿಕೊಂಡ ಅಭಿಮಾನಿಯೊಬ್ಬ ಎದ್ದು ನಿಂತು ''ಭಾರತಿಯವರೇ, ನಿಮ್ಮ ಅದ್ಭುತವಾದ ಯಶಸ್ಸಿಗೆ ಸ್ಫೂರ್ತಿ ಯಾರು'' ಕೇಳಿದ.

ತಮ್ಮ ಹೆಸರೇ ಕೇಳುವುದೆಂದು ಖಚಿತವಾಗಿದ್ದ ಭಾರತಿಯ ಅಪ್ಪ ಟಿ.ವಿ. ಕ್ಯಾಮರಾ ತಮ್ಮತ್ತ ತಿರುಗುವುದೆಂಬ ನಿರೀಕ್ಷೆಯಿಂದ ಟೈ ಸರಿ ಮಾಡಿಕೊಂಡು ಗಂಭೀರ ಮುಖಮುದ್ರೆ ತಳೆದರು. ಭಾರತಿಯ ಅಮ್ಮ ಪರ್ಸಿನಿಂದ ಪುಟ್ಟ ಕನ್ನಡಿ ತೆಗೆದು ಮುಖದ ದರ್ಶನ ಮಾಡಿಕೊಂಡರು. ಸಮಾಧಾನವಾಗಲಿಲ್ಲವೇನೋ, ಮೆಲ್ಲಗೆ ಯಾರಿಗೂ ಕಾಣದಂತೆ ಬೇಗಬೇಗ ಮುಖಕ್ಕೆ ಪೌಡರ್ ಲೇಪಿಸಿಕೊಂಡು ಕಾಲ್ಗೇಟ್ ಸ್ಮೈಲ್ ಬೀರುತ್ತಾ ಕೂತರು. ಶಾಲು ಸರಿ ಮಾಡಿಕೊಂಡು ಕೂತ ಭಾರತಿಯ ಮಾವನ ಕಣ್ಣು ಟಿ.ವಿ. ಕ್ಯಾಮರಾದ ಮೇಲೇ ಇತ್ತು. ತೂಕಡಿಸುತ್ತಾ ಕೂತಿದ್ದ ಭಾಸ್ಕರನಿಗೆ ಇತ್ತಕಡೆ ಪರಿವೆಯೇ ಇರಲಿಲ್ಲ.

''ನನಗೆ ಮದುವೆಯಾದ ಹೊಸದು'' ಭಾರತಿ ಹೇಳಿದಳು. ''ನೂರಾರು ಆಸೆಗಳಿದ್ದವು. ಗಂಡನ ಜೊತೆ ಸಿನಿಮಾ, ಪಾರ್ಕು, ಹೋಟೇಲ್ ಎಲ್ಲ ಕಡೆ ಸುತ್ತಾಡ ಬೇಕೂಂತ. ಆದರೆ ನನ್ನ ಗಂಡನನಿಗೆ ಪಾಪ ಸದಾ ಓವರ್‌ಟೈಮು. ಮನೆಗೆ ಬರುತ್ತಿದ್ದುದೇ ತಲೆಯು ದಿಂಬನ್ನು ಕಾಣುವ ಸಮಯಕ್ಕೆ. ಅಂದಮೇಲೆ ಹೊರಗೆ ಹೋಗುವುದಾದರೂ ಹೇಗೆ? ಆದರೆ ಓವರ್ ಟೈಮಿನಿಂದ ಹಣ ಬರ್ತಾ ಇಲ್ಲ, ಖರ್ಚಾಗ್ತಾ ಇದೆ ಎಂದು ತಿಳಿದಾಗ ಎಲ್ಲಿ ಓವರ್‌ಟೈಮ್ ಆಗ್ತಿದೆಯೆಂದು ತಿಳಿಯಲಾಗದಷ್ಟು ಮುಗ್ಧಳೇನೂ ಆಗಿರಲಿಲ್ಲ ನಾನು. ನನ್ನ ಗಂಡನದು ಬಹಳ ಮೃದು ಹೃದಯ. ಸತ್ಯವನ್ನು ಹೇಳಿ ಹೆಂಡತಿಯ ಮನಸ್ಸನ್ನು ನೋಯಿಸಲಿಷ್ಟವಿರಲಿಲ್ಲ. ತಡವಾಗಿ ಬಂದದ್ದಕ್ಕೆ ಏನೋ ಎಂದು ಕಥೆ ಹೇಳ್ತಾ ಇದ್ದರು. ಮೊದಮೊದಲು ಕೋಪ ಬಂದದ್ದೇನೋ ಉಂಟು. ಆದರೆ ಇವರು ಹೇಳುತ್ತಿದ್ದ ಕಥೆಗಳು ಎಷ್ಟು ಸ್ವಾರಸ್ಯಕರವಾಗಿರುತ್ತಿದ್ದುವೆಂದರೆ ಇವರು ರಾತ್ರಿ ಬರೋದನ್ನೇ ಕಾಯ್ತಾ ಕೂಡೋ ಹಾಗಾಗಿತ್ತು. ಆಗ ಅನಿಸಿತು, ಈ ಸಬೂಬುಗಳಿಗೆ ಬರಹದ ರೂಪ ಏಕೆ ಕೊಡಬಾರದು ಅಂತ. ತಕ್ಷಣ ಬರೆದು ಪತ್ರಿಕೆಗೆ ಕಳಿಸಿದೆ. ಸುಂದರವಾಗಿ ಪ್ರಕಟವಾಗಿ ಬಿಟ್ಟಿತು. ಜನರ ಮೆಚ್ಚುಗೆಯೂ ಸಿಕ್ಕಿತು. ಮುಂದಿನದು ನಿಮಗೆ ತಿಳಿದೇ ಇದೆ. ನಾನು ಬರೆಯಲು ಕಾರಣಕರ್ತರು ಮಾತ್ರವಲ್ಲ ಕಥಾವಸ್ತು ಒದಗಿಸಿದವರೂ ಅವರೇ. ನನ್ನ ಯಶಸ್ಸಿಗೆ ಕಾರಣ ನನ್ನ ಪತಿ ಭಾಸ್ಕರ ಎಂದು ಬೇರೆ ಹೇಳಬೇಕೆ?''.

ಮಾರ್ಡನ್ ಮನೋರಮೆ

ಜಿ.ವಿ. ಅರುಣ

'ಚಿನ್ನಾ ..... ಈಗ ನಾನು ನಿನಗಾಗಿಯೇ ಬರೆದ ಈ ಕತೆ ಓದಿ ಹೇಳ್ಲಾ....?

'ಸರಿಹೋಯ್ತು ..... ಬೆಳಗಿಂದ ಗಾಣದೆತ್ತಿಂಥರ ಕೆಲಸ ಮಾಡಿದ್ದು ಸಾಲ್ದೆ ಈಗ ಇದು ಬೇರೇನಾ! .... ಅಯ್ಯೋ ದೇವ್ರೇ .... ನಾನು ಯಾವ ಪಾಪ ಮಾಡಿದ್ನಪ್ಪಾ? ....'

'ನೀನೇ ಹೀಗಂದ್ರೆ, ಹ್ಯಾಗೆ? .... ಈ ಕತೆ ಕೇಳಿದ್ರೆ ನಿನ್ನ ಆಯಾಸ ಎಲ್ಲ ಪರಿಹಾರವಾಗುತ್ತೆ!'

'ಸದ್ಯ ದಿಂಬಿನ ಮೇಲೆ ತಲೆ ಊರಿದ್ರೆ ಸಾಕಾಗಿದೆ ನಿಮ್ಮ ಕತೆ ಗಿತೆ ಕೇಳೋಕ್ಕೆ ನನಗೆ ಈಗಲ್ಲ, ಯಾವಾಗ್ಲೂ ಪುರುಸೊತ್ತಿರುಲ್ಲ.....'

'ಅಲ್ಲಕಣೆ, ಗಂಡ ಕತೆ ಬರಿತಾನೆ ಅಂದ್ರೆ, ಹೆಂಡತೀರು ಎಷ್ಟು ಸಂತೋಷ ಪಡ್ತಾರೆ, ಅಂತಾದ್ರಲ್ಲಿ ನೀನು .....'

'ಅದ್ಹೇಗೆ ಸಂತೋಷ ಪಡ್ತಾರಪ್ಪ! .... ಸ್ವಲ್ಪ ಹೇಳಿ ಕೇಳೋಣ .....'

'ನೋಡು, ಇಲ್ಲಿ ಅಕ್ಕ ಪಕ್ಕ, ಯಾಕೆ ಈ ರಸ್ತೇಲೇ ನನ್ನನ್ನ ಬಿಟ್ಟು ಕತೆ ಬರೆಯೋ ಆಸಾಮಿ ಇನ್ನಾರು ಇಲ್ಲ. ಈ ರೋಡ್‌ನೋರೆಲ್ಲ ಇವರೆ ಕಣ್ರೆ ಪ್ರಸಿದ್ಧ ಕತೆಗಾರರು ಅಂತ ಮಾತಾಡೋದನ್ನು ಕೇಳೋಕ್ಕೆ ನಿನಗೆ ಸಂತೋಷ ಆಗೋಲ್ವೇನೆ? .... ಅದಕ್ಕೆ ಈ ಕತೆ ಮೊದಲನೆ ಹೆಜ್ಜೆ....!'

'ಆಮೇಲೆ....?!'

'ಈ ಕತೆ ಎಷ್ಟು ಚೆನ್ನಾಗಿದೆ ಅಂದ್ರೆ, ಯಾವ ಪತ್ರಿಕೆ ಸಂಪಾದಕನೇ ಆಗಲಿ ಪ್ರಿಂಟ್ ಮಾಡೇ ಮಾಡ್ತಾನೆ. ಆಗ ನೀನು ಹೊಸ ಸೀರೆ ಹುಟ್ಟುಕೊಂಡು ಅಕ್ಕದ ಮನೆ ಪಕ್ಕದ ಮನೆಗಳಿಗೆ ಹೋಗಿ ಕತ್ತು ಕೊಂಕಿಸಿ ನಮ್ಮೆಜಮಾನ್ರು ಬರ್ದಿರೋ ಕತೆ ಓದಿದ್ರಾ ಅಂತ ಕೇಳಿ ಜಂಬಪಡಬಹುದೋ!?'

'ಅಲ್ರಿ ಸಲೀಸಾಗಿ ಹೇಳಿಬಿಟ್ರಲ್ಲ ಹೊಸ ಸೀರೆ ಉಟ್ಟುಕೊಂಡು ಹೋಗು ಅಂತ.... ಎಲ್ಲಿದೇರೀ ಹೊಸ ಸೀರೆ? ..... ನನ್ನ ಹತ್ರ ಇರೋ ಸೀರೆಗಳನ್ನೆಲ್ಲ ಎಷ್ಟೆಸ್ಟು ಸರಿ ಉಟ್ಟಿದೀನಿ ... ಯಾವ್ಯಾವಾಗ ಉಟ್ಟಿದೀನಿ ಅನ್ನೋ ಲೆಕ್ಕ ಅವ್ರೆಲ್ಲ ಇಟ್ಟಿರಾರೆ.....'

'ಅದು ಹ್ಯಾಗೆ ಸಾಧ್ಯಾನೆ....!?'

'ಹ್ಯಾಗೆ ಅಂದ್ರೆ, ನಾನು ಹ್ಯಾಗೆ ಅವ್ರು ಉಟ್ಟಿದ್ದನ್ನು ನೋಡಿ ಲೆಕ್ಕ ಇಟ್ಟಿರ್ತಿನೋ ಹಾಗೆ ಅವ್ರೂ ಇಟ್ಟಿರ್ತಾರೆ ..... ಅದೆಲ್ಲ ಇರ್ಲಿ ನಾನು ಹೇಳೋದು ಗಮನ ಇಟ್ಟು ಕೇಳಿ .... ಈ ಕತೆ ಗಿತೆ ಬರೆಯೋದನ್ನ ನಿಲ್ಸಿಬಿಡಿ ..... ದೇಶಕ್ಕೆ ಭಾರಿ ನಷ್ಟ ಆಗೋದು

ತಪ್ಪುತ್ತೆ...'

'ನಾನು ಕತೆ ಬರದ್ರೆ ದೇಶಕ್ಕೆ ನಷ್ಟ ಆಗುತ್ತಾ... ಅದು ಹ್ಯಾಗೋ!?'

'ನೀವು ಬರಿಯೋಕ್ಕೆ ಉಪಯೋಗಿಸೋ ಕಾಗ್ದ ಅದನ್ನ ಮುದ್ರಣ ಮಾಡೋಕ್ಕೆ ಉಪಯೋಗಿಸೋ ಕಾಗ್ದ ಇವನ್ನೆಲ್ಲಾ ಮಾಡೋಕ್ಕೆ ಎಷ್ಟು ಮರ ಕಡ್ಡಿದ್ರಾರೆ ಗೊತ್ತಾ....?'

''ಎಲ್ರೂ ಬರಿಯೋಕ್ಕೆ ಆಗುತ್ತೇನೆ?''' ನಮ್ಮಂಥೋರು ಕೆಲವರು ಬರೀತಾರೆ ಉಳಿದೋರು ಓದ್ತಾರೆ .... ಹೀಗೆ ನೀನೇ ಡಿಸ್ಕರೇಜ್ ಮಾಡಿದ್ರೆ ಹೇಗೆ? .... ಆ ಮನೋರಮೆ ನೋಡಿ ಕಲ್ತುಕೊಳ್ಳಬಾರ್ದಾ....?''

'ಯಾರ್ರೀ ಅವಳು ಮನೋರಮೆ....?'

'ಅದೇ ಮುದ್ದಣ್ಣನ ಹೆಂಡತಿ ಕಣೆ... ಅವಳ ಗಂಡನಿಗೆ ಏನು ಕೇಳಿದಳು ಗೊತ್ತಾ?....'

'ಏನು .....?!'

'ರೀ ... ಬೆಳಿಗ್ಗೆ-ರಾತ್ರಿ, ಹೊತ್ತು-ಗೊತ್ತು ಇಲ್ಲದೆ ಮಳೆ ಸುರೀತಾ ಇದೆ.... ನಂಗಂತೂ ಬೇಜಾರಾಗಿ ಹೋಗಿದೆ..... ಒಂದು ಒಳ್ಳೆ ಕತೆ ಹೇಳಿ .... ಅಂದ್ಲು... ಕತೆ ಚೆನ್ನಾಗಿದ್ರೆ ಬಹುಮಾನಾನೂ ಕೊಡ್ತೀನಿ ಅಂದ್ಲು.....!

''ಪುಣ್ಯಾತ್ಗಿತ್ತಿಕಣ್ರೆ ಅವ್ಳು.... ಆಗಿನ ಕಾಲದಲ್ಲಿ ಮಳೆ ಬೆಳೆ ಚೆನ್ನಾಗಿ ಆಗ್ತಾ ಇತ್ತು ಅಂತ ಕಾಣ್ಸುತ್ತೆ .... ಅಲ್ದೆ ಆ ಮುದ್ದಣ್ಣ ಮನೆ ಕೆಲ್ಸದಲ್ಲಿ ಅವನ ಹೆಂಡ್ತಿಗೆ ಸಹಾಯ ಮಾಡ್ತಾ ಇದ್ದನೇನೋ .... ಅದಕ್ಕೆ ಕತೆ ಗಿತೆ ಕೇಳೋಕ್ಕೆ ಅವಳಿಗೆ ಪುರುಸೊತ್ತು ಇರ್ತಾ ಇತ್ತು... ಈಗ ನಾನು ನನ್ನ ಕತೆ ಯಾರಿಗೆ ಹೇಳಿಕೊಳ್ಳಲಪ್ಪಾ .... ಅಯ್ಯೋ ದೇವ್ರೇ...!''


'ದೇವ್ರನ್ನ ನಾನು ಜ್ಞಾಪಿಸಿಕೊಳ್ಳಬೇಕು ಕಣೆ .... ನೀನಲ್ಲ.... ಆ ಮುದ್ದಣ್ಣ ಮನೋರಮೆ ಸಲ್ಲಾಪ ಸ್ವಲ್ಪನಾದ್ರು ಗೊತ್ತಿದ್ರೆ ನೀನು ಹೀಗ್ಯಾಕೆ ಆಡ್ತಿದ್ದೆ....?'

''ಗೊತ್ತುರೀ ....ಚೆನ್ನಾಗಿ ಗೊತ್ತು! ಅದಕ್ಕೆ ಕತೆ ಗಿತೆ ಬರೆಯೋದು ಬೇಡ ಅಂತಿರೋದು!! .... ಏನೋ ನೀವು ಅದು ಇದು ಕೆಲಸ ಮಾಡ್ಕೊಂಡು ಇರೋದ್ರಿಂದ ಆರಕ್ಕೆ ಏಳದೆ ಮೂರಕ್ಕೆ ಮಲಗದೆ ಸಂಸಾರ ಸಾಗ್ತಾ ಇದೆ...... ಇನ್ನು ಕತೆ ಬರೀತೀನಿ ಅಂತ ಮನೇಲೇ ಕೂತುಬಿಟ್ರೆ ನಾನು ''ಭವತಿ ಭಿಕ್ಷಾಂದೇಹಿ'' ಅಂತ ಹೋಗ್ಬೇಕಾಗುತ್ತೆ ಅಷ್ಟೆ....!''

'ಪರವಾಗಿಲ್ವೆ ಮುದ್ದಣ್ಣನ ಸಪ್ತಾಕ್ಷರಿ ಮಂತ್ರ ಬೇರೆ ನಿನಗೆ ಬಾಯಿಪಾಠ ಆಗಿದೆ! ನಾನು ಏನೋ ಅಂತಿದ್ದೆ...!! ಹಾಗಿದ್ರೆ ನನ್ನ ಕತೆ....?.... ಅಲ್ಲ ಮುಸುಕು ಹಾಕಿಕೊಂಡು ಮಲಗಿಕೊಂಡೇ ಬಿಟ್ಟೇನೇ....?'

ಮುದ್ದಣ್ಣ ನೀನೇ ಧನ್ಯ.


ಕೊರವಂಜಿ ಕಂಡ ಮುಖಾಬಿಲಾ!



ಅಯ್ಯೋ ಪಾಪ!
ಯಾರ್ದೊ? ಅವರ್ದೇ!
ಅಪ್ಪಂದೋ ಅಣ್ಣಂದೋ
ಹಳೇದೋ ಹರಕೋ
ಕೊರಕ್ಕಟ್ಟಿದ ಅಂಗಿ
ನಾಕ್ ನಾಕ್ ಗುಂಡಿ
ಹಾಸನ್ ಟೋಪಿ
ಮಂಡಿಮೇಲ್ ಚೆಡ್ಡಿ
ಅದಲು ಬದಲು ಚಪ್ಲಿ
ಹೈಸ್ಕೂಲು ಹೈದ
ಬಾಯಲ್ಲಿ ಬೆರಳಿಟ್ಟರೆ
ಕಚ್ಚೋಕ್ ಬರೋಲ್ಲ
ನಗತಾ ನಗತಾ!
ಕಾಲ ಕಳೆವ!

ಅಮ್ದೊ! ರಾಜಾ!
ಯಾರ್ದೋ! ಏನೋ!
ಅಪ್ಪಂದೋ! ಮಾವಂದೋ!
ಸಾಲಾನೋ ಸೋಲಾನೋ!
ಬಿರಕೊಂಡ್ ಬಿದ್ ಕೋಟು
ಗುಂಡಿ ಗ್ರೆರ್ ಬಾಜರ್!
ಮಂಡೆ ಮೇಗೂ ಖಾಲಿ
ಜರಿ ಸರಿಗೆ ಪಂಚೆ
ಮಣಭಾರ ಚಪ್ಲಿ
ಮಂಡಿಯುದ್ದ ಷರಟು
ಕಾಲೇಜಿನ್ನೂ ಕಾಣ
ಬೆರಳು ಕೊಟ್ಟರೆ ಕೈಕಚ್ತಾನೆ!
ಘಾಟಿ ಅಂದ್ರೆ ಘಾಟಿ!

ತಕ್ಕೊ ಸಪ್ಲೈ!
ಯಾರ್ದೋ! ಏಕೋ!
ಬಡಪಾಯಿ ಬೋರೇಗೌಡ
ಗಿಳಿಹಸಿರು ಬಟ್ಟೆ
ಡಾಕ್ ಠೀಕ್ ಷರಟು
ತಲೆಗೊಂದು ಹ್ಯಾಟು
ಗರಗರಿ ಷರಾಯಿ
ಯಮಭಾರ ಬೂಡ್ಸು
ನಡುಗೊಂದು ಬೆಲ್ಟು
ವಿಶ್ವವಿದ್ಯಾಲಯ
ಲೆಫ್ಟ್ ರೈಟ್! ಲೆಫ್ಟ್ ರೈಟ್!
ಸಿಗರೇಟ್ ಅಂದ್ರೆ
ಕಡ್ಡಿ ಕೇಳ್ತಾನೆ!
ಹೋಷಿಯಾರ್!



ಓಹೋ ಹ್ಯಾಟು!
ಕಾಲರ್ ನೆಕ್‌ಟೈ!
ಷರಟು ಷರಾಯಿ!
ಚಪ್ಪಲಿ ಚೀಲ!
ಸರಿ-ಗೊತ್ತಾಯ್ತು!
ಜೀವ ಸಂಗ್ರಾಮ!
ವಿಮಾ ವಾಣಿಜ್ಯ
ಕಂಡದ್ದಕ್ಕೆ ಕೈ
ತಲೇದು ಕಾಲಿಗೆ
ಕಾಲಿಂದು ತಲೇಗೆ
ದಿನಕ್ಕೊಂದು ಕಸಬು
ತಲೆಯೆಲ್ಲಾ ಯೋಜನೆ
ಅನ್ನಕ್ಕೆ ಮಾತ್ರ ಯೋಚನೆ
ಬುದ್ಧಿಯೋ! ಭಗವಂತ!

ಮೈಸೂರು ರುಮಾಲು
ಕಾಲರ್ ನೆಕ್‌ಟೈ
ಕೋಟು ಬೂಟು
ಇಸ್ತ್ರಿ ಷರಾಯಿ
ಚತ್ರಿ ಚೀಲ
ಬರೀ ಡೌಲು
ಹುಟ್ಟಿಸಿದ ದೇವರು
ಹುಲ್ಲು ಮೇಯಿಸ್ತಾನೆ
ಅವರದು ಇವರಿಗೆ
ಇವರದು ಅವರಿಗೆ
ಕೈಗಂಟಿದ್ದು ತನಗೆ
ತಾರೀಫು ಗಿಲೀಟು
ತಲೆ ಸವರೋ ಮಾತು
ಬಿಟ್ಟೇನೇ ಭಗವಂತ!

ಟೋಪೀನೇ ಟೋಪಿ
ನೆಹರೂ ಬನೀನು
ಉಲನ್ ವೇಸ್ಟು
ಕಚ್ಚೆ ಪಂಚೆ
ಕಂಕಳು ಚೀಲ
ಸತ್ಯ ಅಹಿಂಸೆ
ನಮ್ಮದೇ ತ್ಯಾಗ
ಪುರಾಣ ಹೇಳೋಕೆ
ಬದನೆ ತಿನ್ನೋಕೆ
ಗಾಳಿಗೆ ತೂರಿಕೊ
ಬಿಸಲಿಗೆ ಒಣಗಿಕೊ
ಕವರ್ ಇರೋವರೆಗೂ
ಯಾತಕ್ಕೂ ಭಯವಿಲ್ಲ
- ಜೀಕಿ ಜೈ!

ನಿಮ್ಮಮ್ಮಲ್ಲಿ

ಸಂಪಾದಕರು,

''ಅಪರಂಜಿ'' ಮಾಸ ಪತ್ರಿಕೆ ಇವರಿಗೆ

ಸಮಸ್ಕಾರಗಳು ಫೆಬ್ರವರಿ ತಿಂಗಳಿನ ಅಪರಂಜಿಯ ಎರಡು ಪ್ರತಿಗಳು ನನ್ನ ಕೈಯಲ್ಲಿ ಈ ದಿನ ಇವೆ. ತಾವು ಬರೆದ, ನಾರ್ತ ಬೈನಾರ್ತ್ ವೆಸ್ಟನ ಸಿನಿಮಾದಲ್ಲಿ ನಟಿಸಿರುವ ನಟ ನನಗೆ ಜ್ಞಾಪಕವಿರುವಂತೆ ಕ್ಯಾರಿಗ್ರ್ಯಾಂಟ್, ಜಿಮ್ಮಿ ಸ್ಟೀವರ್ಟ್ ಅಲ್ಲ. ಜಿಮ್ಮಿ ಸ್ಟೀವರ್ಟ್ ಆ ಚಿತ್ರದ ಪಾತ್ರದಾರಿಯೋ ಅಥವಾ ಹಾಲಿವುಡ್ ನಟನೋ ಎಂಬುದು ನನಗೆ ತಿಳಿಯದು. ಈ ಹಾಲಿವುಡ್ ಬಾಲಿವುಡ್ ಹಾಸ್ಯಲೇಖನ ಬಹಳ ಮೆಚ್ಚುಗೆಯಾಯಿತು. ಶ್ರೀ ಟಿ.ಡಿ. ರವರ ಹಂತಗಳ ಮಹತ್ವ ಬಹಳ ಮೆಚ್ಚುಗೆಯಾಯಿತು.

ಶ್ರೀ ನರಸಿಂಹ ಕೌಲಗುಡ್ಡ ರವರ ''ತರ್ಕ'' ಬಹಳ ಚೆನ್ನಾಗಿದೆ. ಇತ್ತೀಚೆಗೆ ಶೀನುರವರ ಲೇಖನಗಳು ಬರುತ್ತಿಲ್ಲ ಯಾಕೆ ಎಂಬ ಪ್ರಶ್ನೆ ಬಹಳ ದಿನಗಳಿಂದಲೂ ಕಾಡುತ್ತಿದೆ.

ಇಂತಿ ನಮಸ್ಕಾರಗಳು

ಜಿ.ಸಿ. ಶರಣಪ್ಪ

ಮಾನ್ಯ ಸಂಪಾದಕರೇ,

ಫೆಬ್ರವರಿ 1996 ರ 'ಅಪರಂಜಿ' ಕೈ ಸೇರಿದಾಗಿನಿಂದಲೂ ಅಂದರೆ ಫೆಬ್ರವರಿ 10 ರಸುಮಾರಿನಿಂದಲೂ ಬರೀ ಬೇಕೂಂತ ಇದ್ದ ಈ ಪತ್ರವನ್ನು ಇಂದು ಕಾರ್ಯಗತ ಮಾಡ್ತಾಯಿದ್ದೀನಿ. 'ಅಪರಂಜಿ ಕಿಡಿ' ಉಡುಪರ 'ಪಾಂಚಾಲಿ ಉವಾಚ' ಕೇಫರ 'ಮಹಾಭಾರ್‍ತಾ ಬೇಕೆ? ''ಕನಕಲಕ್ಷ್ಮೀ ವಿಜಯ'' ಅಂತ ಒಂದೊಂದಾಗಿ ಎತ್ತಿ ಹೇಳೋದಕ್ಕಿಂತ ಒಟ್ಟಿನಲ್ಲಿ ಎಲ್ಲಾ ಅಂದೆ ಎಲ್ಲಾ ಲೇಖನಗಳೂ ಅತಿ ಚೆನ್ನಾ. ನಕ್ಕೂನಕ್ಕೂ ಪಕ್ಕೆಯೆಲ್ಲಾ ನೋವೂಂತ ಹೇಳಿದರೆ ಅತಿಶಯೋಕ್ತಿಯಾಗಲಾರದು. 'ಅಪರಂಜಿ' ಹೀಗೇ ಯಾವಾಗಲೂ ನಕ್ಕು ನಗಿಸುತ್ತಿರಲಿ ಅಂತ ಹಾರೈಕೆ.

ಡಿ.ಟಿ.ಪಿ. ಮುದ್ರಣ ಬಲು ಸೊಗಸು.

ವಂದನೆಗಳೊಂದಿಗೆ

ವಿಜಯ ಸಚ್ಚಿದಾನಂದ

ಮಾನ್ಯ ಸಂಪಾದಕರೇ,

ನಿಮ್ಮಮ್ಮಲ್ಲಿ
ಪುಟಗಳು 1-8, 33-40
ಒಟ್ಟು 16, ನಿಮ್ಮಲ್ಲೇ?

ಶ್ರೀ ರಾಮಕೃಷ್ಣ
ಆಜೀವ ಚಂದಾದಾರರು

ನಮ್ಮ ಉತ್ತರ:- *ಪುಟ ಜೋಡಣೆಯ ಅಚಾತುರ್ಯದಿಂದ ಅನೇಕರಿಗೆ ಇಂತಹ ತಪ್ಪು ಜೋಡಣೆಯ ಪ್ರತಿಗಳು ಸೇರಿದೆ. ನಮ್ಮ ಗಮನಕ್ಕೆ ತಂದವರಿಗೆ ಮತ್ತೆ ಪ್ರತಿಗಳನ್ನು ಹಂಚಿದ್ದೇವೆ, ಪ್ರಮಾದಕ್ಕೆ ಕ್ಷಮೆ ಇರಲಿ.*

-ಸಂಪಾದಕ.

ಬೀದಿಯ ಮಾರಿ

ಪ್ರೊ. ಕೆ.ಎಸ್. ನಿಸಾರ್ ಅಹಮದ್

1

ಬಡಾವಣೆಯಲ್ಲಿ ಮನೆ ಹಿಡಿದಾಗಿನ ಸಂಗತಿ :
ಬೀದಿಗು ಪೊರಕೆಗು ಮೊಖಾಬಿಲೆಯಾಗಿ ಎಷ್ಟು ದಿನವೋ!
ಗಲೀಜನ್ನ ನೋಡಿ ನೋಡಿ ಸಾಕಾಗಿ
ವಾಚಕರ ವಾಣಿ, ಕಾರ್ಪೊರೇಷನ್ನಿಗೆ
ಪುಂಖಾನುಪುಂಖ ಪತ್ರ, ಅರ್ಜಿ ಬರೆದು
ಸಂಬಂಧಿಸಿದವರನ್ನ ಖುದ್ದಾಗಿ ಕಂಡು, ಒರೆದು,
ಬೇಳೆ ಬೇಯದೆ ಬಲು ಬೇಜಾರು ಪಟ್ಟೆ.
ಬೀದಿಯವರಿಗಿರದ ಉಸಾಬರಿ ನನಗೇಕೆಂದು
ಅವರಂತೆಯೇ ಗಲೀಜು, ಗಬ್ಬಿಗೆ
ಮೂಗು, ಮನಸ್ಸನ್ನ ರಾಜಿಗೊಳಿಸಿ
ಸುಮಾರು ಕಾಲ ತಳ್ಳಿದೆ.

ಒಂದು ಮಧ್ಯಾಹ್ನ ನಾನು ಆಫೀಸಿಗೆ ಹೋಗಿದ್ದಾಗ
ನನ್ನ ವಿಳಾಸ ಹಿಡಿದು ಕಾರ್ಪೊರೇಷನ್ ಲಾರಿ
ಸೊಗಸಾದ ಸಿಮೆಂಟ್ ತೊಟ್ಟಿ ಹೊತ್ತು ತಂದಿತ್ತು.
ಇದು ನನ್ನ ಅವಿರತ ಶ್ರಮದ ಫಲವಷ್ಟೆ?
ಇತರರಿಗಿಂತ ಅದರ ಮೇಲೆ ನನ್ನ ಹಕ್ಕು ಹೆಚ್ಚಷ್ಟೆ?
- ಎಂದೇ, ಆ ತೊಟ್ಟಿಯನ್ನ ನನ್ನ ಮನೆಯೆದುರು ಪ್ರತಿಷ್ಠಾಪಿಸಿ
ಕಾರ್ಪೊರೇಷನ್ ಜನ
ನ್ಯಾಯಬುದ್ಧಿಯನ್ನು ಬೀದಿಗೆಲ್ಲಾ ಸಾರಿ
ನನ್ನ ಕೃತಜ್ಞತೆಗೆ ಪಾತ್ರರಾದರು.

ಸಂಜೆ, ಬೀಟಿಗರ ಶಹಬಾಸ್‌ಗಿರಿ
ನನ್ನನ್ನ ಮೂಕಗೊಳಿಸಿತು.
ಒಬ್ಬ ಮಹಾನುಭಾವನಂತೂ ಫ್ಯಾಕ್ಟರಿ ಷಿಫ್ಟ್ ಮುಗಿಸಿ
ಊಟದೆಲೆಯನ್ನು ತೊಟ್ಟಿಗೆ ರವಾನಿಸುವ ಕಾಯಕದಲ್ಲಿ
ನಡುರಾತ್ರಿಯಲ್ಲಿ ನನ್ನನ್ನೆಬ್ಬಿಸಿ
ಧನ್ಯವಾದವರ್ಷಿಸಿ ಧನ್ಯನಾದ.
ಮುಂಚೆ ಹಿತ್ತಿಲಲ್ಲೊ, ತಮ್ಮ ಮನೆಯೆದುರಿನ ಚರಂಡಿಯಲ್ಲೊ
ಮೋಕ್ಷ ಕಾಣುತ್ತಿದ್ದ ಊಟದೆಲೆ
ತೊಟ್ಟಿಗೆ ಬಿದ್ದು ಕೊಳೆಯ ಹತ್ತಿದವು -
ಆಗಾಗ್ಗೆ ಖಾಲಿ ಮಾಡಿ ಸ್ವಚ್ಛಗೊಳಿಸುವ ಮಂದಿಯ ಗೈರು ಹಾಜರಿಯಿಂದ.

2

ಬೀದಿಯೆಂದ ಮೇಲೆ ನಾಯಿಗಳೂ ಇರಬೇಕಲ್ಲವೆ?
ನಮ್ಮ ಬೀದಿಯ ಆ ತುದಿಗೊಂದು ಈ ತುದಿಗೊಂದು
ಎರಡು ನಾಯಿ -
ತಮ್ಮದೇ ಚಕ್ರಾಧಿಪತ್ಯ ಸ್ಥಾಪಿಸಿ, ಗಡಿಗೆರೆ ಭಾವಿಸಿಕೊಂಡು,
ಕಳ್ಳಕಾಕರಿಂದ ನಮಗೂ ನೆಮ್ಮದಿ ನೀಡಿ
ತಾವೂ ನಿಸೂರಾಗಿ ಬಾಳುತ್ತಿದ್ದವು.
ತೊಟ್ಟಿಯ ಪ್ರವೇಶವಾದಂದಿನಿಂದ
ಅವುಗಳ ಗಡಿಗೆರೆ ಕಲಸಿ ಹೋದವು;
ಸಾಮ್ರಾಜ್ಯ ಹಿಗ್ಗತೊಡಗಿತು.
ಯಾವುದೇ ಮನೆಯಿಂದ ಎಲೆಯನ್ನೋ, ತಿಂದು ಮಿಕ್ಕಿದ್ದನ್ನೋ
ತೊಟ್ಟಿಗೆ ಸಾಗಿಸಿದರೆ ಸಾಕು -
ಮರಿ ಕುರುಕ್ಷೇತ್ರಕ್ಕೆ ಮುನ್ನುಡಿ.

ರಜಾ ದಿವಸ ಮಧ್ಯಾಹ್ನ ಒಂದಷ್ಟು ಅಡ್ಡಾಗೋಣ,
ದಿನಾ ಸಂಜೆ ಓದೋಣ,
ರಾತ್ರಿ ಮಲಗೋಣವೆಂದರೆ ರಂಪವೋ ರಂಪ.
ಸಾಲದ್ದಕ್ಕೆ ಇವುಗಳ ಕಹಳೆ ಕೇಳಿ,
ಹಿಂದೆ ನಮ್ಮ ಬೀದಿಯತ್ತ ತಲೆ ಹಾಕದ
ಇತರ ಬೀದಿ ನಾಯಿಗಳೂ ಲಗ್ಗೆ ಹಾಕಿ
ರಾತ್ರಿ ಗದ್ದಲವೋ ಗದ್ದಲ.
ತೊಟ್ಟಿಗೆದುರಾಗಿದ್ದ ನನ್ನ ಕೋಣೆಗೆ
ದಿನಕ್ಕೊಂದು ನಮೂನೆಯ ನರುಗಂಪು ಬೇರೆ.

3

ಒಂದು ನಡುರಾತ್ರಿ,
ನಮ್ಮ ಆಫೀಸಿನ ಜವಾನರನ್ನು ಗುಪ್ತವಾಗಿ ಕರೆಸಿ,
ತೊಟ್ಟಿಯನ್ನು ಬೀದಿ ತಿರುವಿಗೆ ಗಡೀಪಾರುಗೊಳಿಸಿದೆ.
ಈಗ ಚೆನ್ನಾಗಿ ನಿದ್ದೆ ಹತ್ತುತ್ತಿದೆ.

(ನಿಸಾರರ ''ಸ್ವಯಂಸೇವೆಯ ಗಿಳಿಗಳು'' ಕವನ ಸಂಕಲನದಿಂದ ಆಯ್ದ ಕವಿತೆ)

ಹವಾಲ

ಮಂತ್ರಿಯ ಮಡದಿ ಕೂಗಿದಳು
ನಿಂ ಹೆಸರಿಗೂ ಬಂತೆ ಹವಾಲ?
ಪತಿರಾಯ ಉತ್ತರಿಸಿದ
ಹೆದರದಿರು, ಎದುರಿಸುವೆ ಸವಾಲ!!

ಕಪಟ ಕವಿ

ಹೇಳಿ ಫಲವೇನ್

ಅ.ರಾ.ಸೇ

ರಾಯ:

ಹಿಂದೆ ವೆಸ್ಟಿಂಡಿಯರ ಕೈಯಲಿ
ತಿಂದು ಉಂಡೆಯ ಬಳಿಕ ಭಾರತ
ಮಂದಿ ನೆರೆದುದು ದತ್ತುಗಾಯಕವಾಡನಾಶ್ರಯದಿ
ಮುಂದೆ ಪಯಣವ ಬೆಳೆಸಿ ಯೂ.ಕೆ.ಗೆ
ಛಂದದಲ್ಲಿ ರಬ್ಬರನು ಪಡೆಯಲು
ಬಂದು ಸೇರಿತು ಏನ ಹೇಳುವೆ ನಮ್ಮವರ ಬಲುಹ ॥೧॥

ಅರಿಯೆವೇ ಈ ಪೀಟರನ ತಾ
ವರಿಯವೇ ಕೌಡ್ರಿ ಸ್ಪೀಡೇ
ಕೊರತೆಯಾಗಿಹ ಟ್ರೂಮನೆಂಬವ ನೆಮ್ಮಗಿದಿರಾಳೆ
ಕೆರಳಿ ಮೆಕ್ಕಿಫ ಬೆನಡರಿವರನು
ತರೆ ಬಡಿಯರೇ ತರಳರಿವರನು
ಮುರಿದು ರಬ್ಬರ ತರುವೆವೆಂದಿಂಡಿಯರು ಘರ್ಜಿಸಿತು ॥೨॥

ನಿಂದು ಕೇಂಬ್ರಿಡ್ಜಿನಲಿ ಬಾಲಕ
ವೃಂದವನು ಕ್ರಿಕ್ಕೆಟಲಿ ಗೆಲಿದರು
ಮುಂದೆ ಗ್ಲಾಮರ್ಗನ್ನಿನಲ್ಲಿ ಪರಿಭವವನನುಭವಿಸಿ
ನೊಂದು ಸರ್ರೆಯ ಮ್ಯಾಚಿನಲಿ ಬಳಿ
ಕಂದು ಮೊದಲನೆ ಟೆಸ್ಟಿನಲಿ ತಾವ್
ತಿಂದರೋ ಪರಿಭವವ ಅಪಮಾನವನು ಎಲೆಕೊಟ್ರ ॥೩॥

ಬಳಿಕ ಕಾರ್ಡ್ಸಿನ ಟೆಸ್ಟಿನಲಿ ತಾ
ವಳುಕಿ ಜಯವನು ಬ್ರಿಟನಿಗೊಪ್ಪಿಸಿ
ಕಳದೊಳಹಿತರ ಕಂಡು ಬೆದರಿದರಿಂಡ್ಯಕ್ರಿಕ್ಕೆಟರು
ನೆಲದಳತೆಯಲಿ ಕಂಡು ನಕ್ಕರು
ಹುಳುಕರಿವದಿರು ಜಯವ ಗಳಿಪರೆ
ಬಳೆಸರೇತಕೆ ವಿನು ಅಬಾಸರನೆಂದು ಕಿರುಚಿದರು. ॥೪॥

ಎಂಟು ವಿಕೆಟಿಗೆ ಐದು ನೂರನು
ಟೆಂಟಣಿಸಿ ಬಿಗಿದವರು ಹಿಂಗಲು
ವೆಂಟಣಿಸಿತೋ ಮತ್ತೆ ನಮ್ಮಯ ಮಂದೆ ಕಾಳಗಕೆ
ಭಂಟರೇ ಬೌಂಡರಿಯರ ಬಿಗಿವರೆ
ಕುಂಟರಿವದಿರು ರನ್ನ ಗಳಿಪರೆ
ಗಂಟಲಿಗೆ ಗಾಳವನು ಹಾಕರೆ ಫ್ರೆಡ್ಡಿಕ್ಲೋಸುಗಳು ॥೫॥

ಕೊಟ್ರ:

ಅರಿಗುಸುರುವೆ ನಾರಿಗರುಹುವೆ
ನಾರಸಾರುವೆನಾರಿಗೊರಲುವೆ
ನಾರನೊದೆಯುವೆನಕಟ ಇವದಿರ ಜನ್ಮವನು ಸುಡಲಿ
ಪೂರ ಹೇಡಿಗಳಿವರ ವೊಲುಮು
ನ್ನಾರು ಜನಿಸಿದರುಂಟು ಮರಣವೆ
ಭಾರಿ ಸಂತಸಯಿಂಥ ಅಪಕೀರ್ತಿಯನು ಹೊದ್ದುವರೆ ॥೯॥

ಅಂದು ಇಂಗ್ಲೆಂಡವರು ಆಟಕೆ
ಬಂದು ಚರಟವ ಹರಿದು ಕೊಟ್ಟರು.
ಕೊಂದು ಹಾಕಿದರೆಮ್ಮ ಹುಡುಗರ ಹಾಲಗಿಲ್ ಕ್ರಿಷ್ಟ
ಇಂದು ಸ್ವಾಥಮಟ್ರೂಮನಾದಿಗ
ಳಂದ ಗೆಡಿಸುತಲಿಹರು ಬಲ್ಲಿದ
ರೆಂದು ಕಳುಹಲು ಮುಖಕೆ ಮಸಿಯನು ಬಳಿದರೀ ಜನರು॥೧೦॥


ಆಳೊಳೊಡ್ಡುಳ್ಳವರು ಭಾರಿಯ
ತೋಳುಗಳ ಹೊತ್ತವರು ಉಳಿದೆಡೆ
ಕೋಳಿಗಳ ಬೌಲಿಂಗಿನಲಿ ಸೆಂಚುರಿ ಮೇಲೆ ಸೆಂಚುರಿಯ
ಹೋಳಿಗೆಯ ಮೆದೆಯಂತೆ ಪೇರಿಸಿ
ಕಾಲ ವೊದಗಲು ಮುಂದೆ ಟೆಸ್ಟಲಿ
ಕಾಳುಗೆಡೆಯುತ ಸತ್ತು ಸಾಯದೆ ಇರುವರೆಂತೆಂದ ॥೧೨॥

ಕಾಲವಾಹನದಂತೆ ಮೆರೆವೆ
ಚ್ಚಾಳು ತನದವರೆಲ್ಲ ಟೆಸ್ಟಲಿ
ಸೋಲ ತಿಂದಿರಿ ಪಾಪಿಗಳಿರಪಕೀರ್ತಿಗಳುಕಿರಲಾ
ತೋಳಹೊರೆ ನಿಮಗೇಕೆ ಯಕಟವಿ
ಶಾಲ ಪೃಥ್ವಿಯೊಳುದಿಸಲೇತಕೆ
ಕೂಳುಗೇಡಿಂಗೊಡಲ ಹೊರುವಿರಿ ಎಂದನಾಕೊಟ್ರ॥೧೪॥

ರಾಯ:

ಕೇಳು ಕೊಟ್ರನೆ ಪೂರ್ವ ಸುಕೃತದ
ಶಾಲಿವನ ವೊಣಗಿದೊಡೆ ಭಾರಿಯ
ತೋಳ ಹೊತ್ತೀಯಧಟರೆಮ್ಮನು ವಂಚಿಸಿದ ಬಳಿಕ
ಬಾಳಲಿಪಿಯಲಿ ಗೆಲವನಾಪ್ರತಿ
ಕೂಲವಿಧಿ ತಾ ಬರೆಯದಿದ್ದರೆ
ಹೇಳಿ ಫಲವೇನ್? ಏಕೆ ಕ್ರಿಕ್ಕೆಟ ತಂಟೆ ನಮಗಿನ್ನು ॥೧೫॥

ಆದಿಮಾನವ ಬೆಂಕಿಯನ್ನು ಮೊಟ್ಟಮೊದಲಿಗೆ ಕಂಡು ಹಿಡಿದಾಗ!



ಮ್ಯಾಡ್ ಕೃಪೆ

ಧೂಮಕೇತು

(ಕಿರು ಪ್ರಹಸನ)

ತುರುವೇಕೆರೆ ಪ್ರಸಾದ್

ದೃಶ್ಯ - 1

(‘ಧೂಮಕೇತು’ ವಾರಪತ್ರಿಕೆಯ ಕಛೇರಿಯ ಒಳನೋಟ. ತಗಡಿನ ಶೆಡ್ಡಿನ ತುಂಬಾ ಧೂಳು. ನಾಲ್ಕಾರು ಟೇಬಲ್‌ಗಳ ಮೇಲೆಲ್ಲಾ ಹರಡಿದ, ಚೆಲ್ಲಾಪಿಲ್ಲಿಯಾದ ಹಸ್ತಪ್ರತಿಗಳು. ಮೂಲೆಯಲ್ಲಿ ಕಲಾವಿದ ‘ಕೋದಂಡ’ ಕ್ಯಾನ್‌ವಾಸ್ ಮೇಲೆ ಯಾವುದೋ ಮಾಡ್ರನ್ ಆರ್ಟನ್ನು ಅರ್ಧಕ್ಕೇ ನಿಲ್ಲಿಸಿ ಪ್ರಕೃತಿಯ ಕರೆಗೆ ಓಗೊಟ್ಟು ಎದ್ದು ಹೋಗಿದ್ದ. ಸೀಟುಗಳೆಲ್ಲಾ ಖಾಲಿ ಖಾಲಿ. ಎಡಪಾರ್ಶ್ವಕ್ಕೆ ಪ್ರತ್ಯೇಕವಾದ ಪ್ಲೇವುಡ್ಡಿನ ಬೋನು. ಆ ಬೋನಿನ ಮೆಲ್ಭಾಗದಲ್ಲಿ ಸಂಪಾದಕರು’ ಎಂಬ ಫಲಕ. ಅದರ ಕೆಳಗೆ ‘ಅಪ್ಪಣೆ ಇಲ್ಲದೆ ಪ್ರವೇಶವಿಲ್ಲ’ ಎಂಬ ಎಚ್ಚರಿಕೆಯ ಉಪಫಲಕ. ನೇಪಥ್ಯದಿಂದ ವಿವಿಧ ರೀತಿಯ ನಗುವಿನ ಸ್ವರಗಳು ಅಲೆ ಅಲೆಯಾಗಿ ಕೇಳಿಸುತ್ತವೆ. ಸುನಿತಾ, ಭಾಮಾ, ಶೈಲೇಶ, ಪರ್ಮೇಶಿ ನಾಲ್ವರೂ ಒಬ್ಬೊಬ್ಬರಾಗಿ ನಗುತ್ತಲೇ ಒಳಬರುತ್ತಾರೆ. ಭಾಮ, ಶೈಲೇಶ, ಪರ್ಮೇಶಿ ಮೂವರೂ ಒಂದೊಂದು ಮುರುಕಲು ಕುರ್ಚಿಗಳನ್ನು ಎಳೆದು ತಂದು ಸುನೀತಾಳ ಟೇಬಲ್ ಮುಂದೇ ವಿವಿಧ ಭಂಗಿಯಲ್ಲಿ ಆಸೀನರಾಗುತ್ತಾರೆ. ಗುಸು ಗುಸು, ನಗು ಮುಂದುವರೆದಿರುತ್ತದೆ.)

ಸುನಿತಾ : ತುಂಬಾ ಸೆಕೆ ಅಲ್ವಾ?

ಶೈಲೇಶ : ಮತ್ತೆ ಈ ತಗಡಿನ ಕೆಳಗೆ ಕೂತ್ರೆ ಇನ್ನೇನಾಗುತ್ತೆ? ನಮ್ಮ ಯೋಗ್ಯತೆಗೆ ಒಂದು ಫ್ಯಾನು ಬೇಡವಾ?

ಪರ್ಮೇಶಿ : ಅವರೇನಯ್ಯಾ ಮಾಡ್ತಾರೆ? ತಿರುಗುವ ಫ್ಯಾನು ಯಾರ್ದಾದರೂ ತಲೆ ಕತ್ತರಿಸಿದರೆ ಗತಿ ಏನು?

ಭಾಮ : ಇದಕ್ಕೇ ನೀವು ಹೀಗೆ ಒದ್ದಾಡ್ತೀರಲ್ಲಾ. ಪಾಪ! ಸಂಪಾದಕರು ಆ ಬೋನಲ್ಲಿ ಬೆವರು ಸುರಿಸ್ತಾ ಇಡೀ ದಿನ ಕೂತಿರ್ತಾರೆ. ಅವರ ಬಗ್ಗೆ ಏನಾದರೂ ಯೋಚಿಸಿದ್ದೀರಾ?

ಪರ್ಮೇಶಿ : ಯೂ ಆರ್ ರೈಟ್ ಭಾಮಾ. ಸಂಪಾದಕರು ಆಗಾಗ್ಗೆ ಹೇಳ್ತಾ ಇರಲ್ವ! ನೀವು

ಇನ್ನೂ ಪಕ್ವವಾಗಬೇಕು, 'ಬೇಕ್' ಆಗಬೇಕು. ಬೆಯ್ಯಬೇಕು ಅಂತ.

ಸುನಿತಾ : (ವ್ಯಂಗವಾಗಿ) : ಪಾಪ! ಸಂಪಾದಕರು ಆ ಓವನ್‌ನಲ್ಲಿ ಬೆಂದು ಕರುಕಾಗಿ ಬಿಟ್ಟಿದ್ದಾರೆ. ಅದಕ್ಕೇ ಹಾಗೆ ತೊಳೆದ ಕೆಂಡದಂತಿರುವುದು. ಭದ್ರಾವತಿ ಸ್ಟೀಲು.

ಶೈಲೇಶ : ಬರೀ ತಗಡೇ ಅಲ್ಲ ಕಣಯ್ಯ; ಈ ತವುಡು ಸಾಹಿತ್ಯವೂ ತನ್ನ ಪ್ರಚಂಡ ದಾವಾಗ್ನಿಯನ್ನೂ ಲೇಸರ್ ಕಿರಣಗಳಂತೆ ಹೊರ ಚೆಲ್ಲುತ್ತವೆ. ಅದಕ್ಕೇ ಇಷ್ಟು ಸೆಕೆ (ಕರ್ಚೀಫ್‌ನಿಂದ ಮುಖ ಮತ್ತು ಅದರ ವಿಸ್ತರಣೆ ತಲೆಯನ್ನು ಒರೆಸಿಕೊಳ್ಳುವನು.)

ಭಾಮ : ಅಲ್ಲ; ಇಷ್ಟೊಂದು ಸಾಹಿತ್ಯ ಯಾಕೆ ಇಲ್ಲಿ ಹುರುಳಿಯಂತೆ ಕೊಳೀತಾ ಇದೆ ಅಂತ ನನಗೆ ಅರ್ಥವಾಗ್ತಿಲ್ಲ.

ಪರ್ಮೇಶಿ : ಯಾಕೆ ಅಂದ್ರೆ ಸಂಪಾದಕರು ಆರ್ಡರ್ ಮಾಡಿದ್ದ ನಮ್ಮೆತ್ತರದ ಸ್ಪೆಶಲ್ ಕ.ಬು.ಗಳು ಇನ್ನೂ ಬಂದಿಲ್ಲ.

(ಎಲ್ಲಾ ನಗುವರು)

ಸುನೀತಾ ; ಸರಿ;ಸರಿ, ಈ ಶೆಡ್ಡಿನಿಂದ ಕಾಲೆಳೆದುಕೊಂಡು 2 ಕಿ.ಮೀ. ಕಾಮತರ ಕೆಫೆಗೆ ಹೋಗಿ ಬರುವ ಹೊತ್ತಿಗೆ ಸಾಕು ಸಾಕಾಯಿತು. ನನಗಂತೂ ಹೊಟ್ಟೆ ಹಸೀತಾ ಇದೆ. (ಲಂಚ್ ಬಾಕ್ಸ್ ತೆಗೆಯುವಳು)

ಶೈಲೇಶ : ಇನ್ನೇನು ಗಂಟೆ ಒಂದಾಯ್ತಲ್ಲ. ನಾವೂ ತದುಕ್ತೀವಿ. (ಎಲ್ಲಾ ಎದ್ದು ಹೋಗಿ ತಮ್ಮ ತಮ್ಮ ತಿಂಡಿ ಡಬ್ಬಿಗಳನ್ನು ತಂದು ಮತ್ತೆ ಸ್ವಸ್ಥಾನಕ್ಕೆ ಮರಳುವರು)

ಭಾಮಾ : (ಡಬ್ಬಿ ಬಿಚ್ಚುತ್ತಾ) ಯಾಕೋ ಹೊಟ್ಟೆ ತೊಳಸಿ ವಾಂತಿ ಬರುವಂತಾಗ್ತಿದೆ.

ಸುನೀತಾ : ಓಹೋ; ಏನಾದರೂ ಸ್ವೀಟ್ ನ್ಯೂಸ್?

ಭಾಮಾ : ನಿನ್ನ ತಲೆ; ಎಂತದೂ ಇಲ್ಲ, (ಟೇಬಲ್ ಮೇಲೆ ಕೂತು) ಅಯ್ಯೋ; ಈ 'ಧೂಮಕೇತು' ಪ್ರತಿ ಇಲ್ಲೆ ಬಿದ್ದಿದೆ. ಅದಕ್ಕೆ ಈ ತರಹ ವಾಕರಿಕೆ.

ಶೈಲೇಶ : ಅಂತಹುದೇನಿದೆ ಅದರಲ್ಲಿ?

ಪರ್ಮೇಶಿ : ಸಂಪಾದಕರು ಕಕ್ಕಿಲ್ಲಾ ನಾಲ್ಕು ಪುಟ. ಗಬ್ಬು ನಾರ್ತಿದೆ.

ಸುನೀತಾ : ಅಂದಾಗ್ಗೆ ಈ ವಾರ ಏನು ಕಕ್ಕಿದಾರೆ?

ಭಾಮಾ : ಇನ್ನೇನು ಯಾವುದೋ ವ್ಯವಸ್ಥೆಯ ಕೆಂಪು ಪಟ್ಟಿಗಳ ಬಗ್ಗೆ ಕಕ್ಕಿರಬೇಕು;

ಪರ್ಮೇಶಿ : ನಿಮ್ಮ ಊಹೆ ತಪ್ಪು. ಈ ಬಾರಿ ಸಂಪಾದಕರು ಕೊಳೆತು ನಾರುವ 'ಕಾರ್ಪೊರೇಶನ್ ಗಟಾರಗಳಲ್ಲಿ' ಕಕ್ಕಿದಾರೆ.

ಶೈಲೇಶ : ಮತ್ತವೇ ಗತಿ? ವಿಮಾನ, ರೈಲುಗಳಲ್ಲಿ ಬಾಯಿಗೆ ಬಂದಿದ್ದನ್ನೆಲ್ಲಾ ಕಕ್ಕಿ ಉಗಿಸಿಕೊಂಡರು. ಈಗ ಗಟಾರವೇ ಗತಿ.

ಸುನೀತಾ : ನಮ್ಮ ಸಂಪಾದಕರಿಗೆ ಎಂತಹುದೋ ಕಾಯಿಲೆಯಿರಬೇಕು. ಅಬ್ಬ ಅದೆಷ್ಟು ಕಕ್ಕುತ್ತಾರೆ! ಮುಂಚೆ ಒಂದು ಪ್ಯಾರಾ, ಆಮೇಲೆ ಪುಟ, ಎರಡು ಪುಟ, ನಾಲ್ಕು ಪುಟ, ಆರು ಪುಟ, ಒಂದು ರೀತಿ ''ಕಕ್ಕುವ ಕ್ಯಾನ್ಸರ್'' ಅಥವಾ ಏನು ನೋಡಿದರೂ ಕಕ್ಕುವ ಅಲರ್ಜಿ. ತುಂಬಾ ಅಸಹ್ಯದ ಮನುಷ್ಯ. ಈ ಕಕ್ಕಿದ ನಾಲ್ಕು ಪೇಜು ಒರಸಲೇ ಉಳಿದ 60 ಪೇಜು ಬೇಕಾಗುತ್ತದೆ.

ಪರ್ಮೇಶಿ : ಹೌದು ಮತ್ತೆ? ನಮ್ಮ ಪತ್ರಿಕೆಯ ಹೆಸರೇ ಧೂಮಕೇತು. ಅಂದ್ರೆ ಒಂದು ರೀತಿಯಲ್ಲಿ ಪೊರಕೆ. ಪೊರಕೆಯ ಕೆಲಸವೇ ಇಡೀ ಸಮಾಜವನ್ನು ಅಲ್ಲ ಅದರ ಹೊಲಸನ್ನ ಗುಡಿಸಿ ಸಾರಿಸುವುದು. ವಿಪರ್ಯಾಸವೆಂದರೆ ನಮ್ಮ ಪತ್ರಿಕೆ ಸಂಪಾದಕರು ಕಕ್ಕಿದ್ದನ್ನೇ ತೊಳೆಯಬೇಕಾಗಿದೆ.

ಶೈಲೇಶ : ಅಲ್ಲ ಈ ವಯ್ಯ ತನ್ನನ್ನ ತಾನು ಏನು ಅಂತ ತಿಳ್ಕಂಡಿದಾನೆ? ದೊಡ್ಡ ಬೃಹಸ್ಪತಿ ತರ ಆಡ್ತಾನೆ. 'ವಿಶ್ವಾಮಿತ್ರ' ಪತ್ರಿಕೆಯ ವಿಶ್ವಾಸ್ ರವರ ಸಂಪಾದಕೀಯ ಸಂಗ್ರಹಕ್ಕೆ ಅಕಾಡೆಮಿ ಅವಾರ್ಡ್ ಬಂದಂತೆ ತನಗೂ ಬರುತ್ತೆ ಅಂತ ತಿಳ್ಕಂಡಿದೆ ಕಾಡು ಪಾಪ; ಅವರ ದಾರ್ಶನಿಕ ಚಿಕಿತ್ಸಕ ದೃಷ್ಠಿಯೆಲ್ಲಿ? ಇವನ ಕುಹಕ ಛತ್ರಿ ಬುದ್ಧಿ ಎಲ್ಲಿ?

ಸುನಿತಾ : ಆದ್ರೂ ನಂಗೆ ಮೊದ್ಲಿಂದ ಒಂದು ಡೌಟು ಇದ್ದೇ ಇದೆ. ಈ ಒಣಕಲ ಪ್ರಾಣಿ ತಾನಾಗೇ ಹೀಗೆ ಕಕ್ಕುತ್ತೇಂದ್ರೆ ನನಗೆ ನಂಬಕ್ಕೆ ಆಗ್ತಿಲ್ಲ. ಯಾರಾದ್ರೂ ಬೆರಳಿಟ್ಟು ಕಕ್ಕುಸ್ತಿದಾರಾ ಅಂತ;

ಭಾಮಾ : ಥೂ; ಸಾಕು ನಿಲ್ಲಿಸಿ, ಲಂಚ್ ಅವರ್‌ನಲ್ಲಿ ಎಂತ ಅಸಹ್ಯದ ಮಾತು. ಕಮಾನ್ ವಿ ಶಲ್ ಸ್ಟಾರ್ಟ್ ಅವರ್ ಲಂಚ್.

(ಎಲ್ಲಾ ಮತ್ತೆ ಪಿಸುಗುಡುತ್ತಾ, ನಗುತ್ತಾ ತಿಂಡಿ ತಿನ್ನುವರು)

ದೃಶ್ಯ - 2

(ಪತ್ರಿಕಾ ಕಛೇರಿಯ ಹೊರಭಾಗ. ಮರದ ನೆರಳಿನಲ್ಲಿ ವಿಷಕಂಠ, ಮೈಲಾರಿ, ಪ್ರದ್ಯುಮ್ನ ಒಣ ಭಾಷಣ ಹೊಡೆಯುತ್ತಿದ್ದಾರೆ).

ವಿಷಕಂಠ : ಅನನ್ಮಕ್ಕಳ್ಳು ಪರ್ಮೇಶಿ, ಶೈಲೇಶನ್ನ ನೋಡುದ್ರೆ ಅಯ್ಯೋ ಅನಿಸುತ್ತೆ

ಮುಂಡೇವು ಆ ಸುನಿತಾಳ ಹಿಂದೆ ಗ್ರಹಗಳಂತೆ ಗಿರಕಿ ಹೊಡೆಯುತ್ವೆ.

ಮೈಲಾರಿ : ಲೇಯ್; ಅವಳ್ಯಾರು? ಸುನೀತಾ; ಅಂದ್ರೆ ಚೆಲುವು, ಸೌಂದರ್ಯ, ಶೃಂಗಾರದ ಹದಿನಾಲ್ಕು ಸಾಲಿನ ಸಾನೆಟ್; ಸೊಬಗಿನ ಪ್ರೇಮಕಾವ್ಯ

ಪ್ರದ್ಯುಮ್ನ : ಯಾಕೋ; ಅಕ್ಸಿಸ್‌ನಿಂದ ಆ ಕಡೆ ವಾಲ್ತಾ ಇದೀಯ.

ಮೈಲಾರಿ : ಹಾಗಲ್ಲವೋ; ಇರೋ ವಿಚಾರ ಹೇಳುದ್ರೆ ಏನು ತಪ್ಪು? ಮಾಣಿಕ್ಯ ಕತ್ತಲಲ್ಲೂ ಹೊಳೆಯುತ್ತೆ, ಗಾಜಿನ ಚೂರಿಗೆ ಎಷ್ಟು ಮರ್ಕ್ಯುರಿ ಲೈಟು ಹಾಕುದ್ರೆ ಏನು ಬಂತು? ಹೊಳೆಯುತ್ತಾ?

ವಿಷಕಂಠ : ಅಂದ್ರೆ ನೀನು ಪಕ್ಷ ಬದಲಾವಣೆ ಮಾಡಿದೀಯ ಅನ್ನು;

ಮೈಲಾರಿ : ನೋಡು ಆ ಕೆಲಸ ಮಾಡೋನು ನೀನು. ಕೈಗೆ ಸಿಗದ ಹುಳಿ ದ್ರಾಕ್ಷಿ ತರ ಹೀಗಳಿಯೋನೂ ನೀನೆ; ಅವಳ ಕೈಯಲ್ಲಿ ಕೈಯಿಟ್ಟು ಓಡಾಡಬೇಕು ಅಂತ ಹಂಬಲಿಸೋ ಹುಂಬನೂ ನೀನೇ. ನಮ್ಮ ಪತ್ರಿಕೆಯ ಹೆಸರೇ 'ಧೂಮಕೇತು' ಸಂಪಾದಕರು ಸೂರ್ಯಕಾಂತ್. ನಾವೆಲ್ಲಾ ಒಂಥರಾ ಆಕಾಶಕಾಯಗಳು. ನಮ್ಮದು ಒಂದು 'ಹಾಲುಪಥ' ಆ ನನ್ಮಕ್ಕಳುದು ಒಂದು ಹಲಾಲ್‌ಕೋರ 'ಆಲ್ಕೋಹಾಲ್ ಪಥ' ನೀನು ಆಗಾಗ್ಗೆ ಆ ಪರ್ಮೇಶಿ, ಶೈಲೇಶನ್ನ ನೋಡಿ ನೋಡಿ ಅಯ್ಯೋ ಅನ್ನೋದು ಕಂಡು ನನಗೆ ಅಯ್ಯಯ್ಯೋ ಎನಿಸುತ್ತೆ.

ಪ್ರದ್ಯುಮ್ನ : ನೀನು ಹೇಳೋದು ಸರಿ ಬಿಡು. ಅವಳು ಒಂದು ನಕ್ಷತ್ರ. ಸುತ್ತೋ ಗ್ರಹಗಳು ಸುತ್ತುತ್ವೆ. ಬೆಳಕು ಹರಿಯೋತನಕ ಇದೊಂದು ಭ್ರಮೆಯಾಟ. ಆ ಮೇಲೆ ಮತ್ತೆ ಹೊಸ ಬ್ರಹ್ಮಾಂಡ ಹುಡುಕೋದು ಇದ್ದೇ ಇದೆ.

ವಿಷಕಂಠ : ಅಂದ್ರೆ ನೀವು ಹೇಳೋದು ನನಗೂ ಅವಳ ಮೇಲೆ ಮನಸ್ಸಿದೆ ಅಂತ;

ಪ್ರದ್ಯುಮ್ನ : ಅಲ್ಲ ಯಾಕಿರಬಾರದು? ದಿನಾ ನೋಡೋ ಕತ್ತೇನೂ ಚೆನ್ನಾಗಿ ಕಾಣುತ್ತಂತೆ. ನೀನೂ ಒಬ್ಬ ಅರ್ಹ ಅಭ್ಯರ್ಥಿ. ಅವಳು ದಿನಾ ನಿನ್ನ ನೋಡದೇ ಇರಬಹುದು. ಆದ್ರೆ.....

ವಿಷಕಂಠ : ''ಅಂದ್ರೆ ನೀ ಹೇಳೋದು''.....

ಮೈಲಾರಿ : ನಿನ್ನ ಅಪ್ರೋಚ್ ಸರಿ ಇಲ್ಲ ಅಂತ. ನೋಡೋ ನೀನು ಆತ್ಮ ವಂಚನೆ ಮಾಡ್ಕತಿದೀಯ. ಆ ನಕ್ಷತ್ರದ ಸುತ್ತ ಸುತ್ತೋದು ಬಿಟ್ಟು, ಆ ಎರಡು ದರಿದ್ರ ಗ್ರಹಗಳ ಅಸೂಯೆಯ ಉಪಗ್ರಹವಾಗಿ ನೀನು ಸುತ್ತುತ್ತಾ ಇದೀಯ. ನಿಜ ಹೇಳು ನಿಂಗೆ ಅವಳ ಮೇಲೆ ಮನಸ್ಸಿಲ್ಲವಾ? ಕವನ,

ವಿಮರ್ಶೆ ಓದಿ ಓದಿ ಕಣ್ಣು ತೂತಾಗಿ, ತಲೆ ಕೆಟ್ಟು ಯಾವ್ದಾರ ಹುಚ್ಚಾಸ್ಪತ್ರೆ ಸೇರಲಿ ಅಂತ ನಾವು ಅವಳಿಗೆ ಆ ಸೆಕ್ಷನ್ ಕೊಡಿಸಿದ್ದೆವು. ನೀನು ಸಂಪಾದಕರಿಗೆ ಪೂಸಿ ಹೊಡೆದು 'ಮಕ್ಕಳ ಪ್ರಪಂಚ' ವಿಭಾಗಕ್ಕೆ ಹಾಕುಸ್ದೆ. ಬೀದಿ ಬಾಗಿಲಿಲ್ಲಿ ಹಾಕ್ಸಿದ್ದು ಅವಳ ಟೇಬಲ್ ತರ್ಸಿ ನಿನ್ನ ಮುಂದೆ ಹಾಕುಸ್ಕಂಡೆ. ಅವಳ ಸಬ್ ಎಡಿಟರ್ ಗಿರೀನ ಖಾಯಂ ಮಾಡಿಸಿ ಅವಳ ತಲೆ ತಿರುಗುವ ಹಾಗೆ ಮಾಡಿಸ್ದೋನೂ ನೀನೇ; ನೋಡೋ ಹೆಣ್ನ ವಶಪಡಿಸಿಕೊಳ್ಳಕ್ಕೆ ಎರಡು ದಾರಿಯಿದೆ. 'ಒಂದು; ಸಂಪೂರ್ಣ ಶರಣಾಗತಿ, ಎರಡನೇದು: ಶೌರ್ಯ ಅಥವಾ ಸವಾಲಿನಲ್ಲಿ ವೀರನಾಗಿಯೋ, ಪ್ರತಿಸ್ಪರ್ದಿಯಾಗಿಯೋ ಗೆದ್ದು ಸೋಲುವುದು.' ನಿನಗೆ ಇವೆಲ್ಲ ಅರ್ಥ ಆಗಲ್ಲ ಬಿಡು.

ವಿಷಕಂಠ : ಹಾಳಾಗ್ಲಿ ಬಿಡ್ರೋ, ಎಲ್ರೋ ಸಂಪಾದಕರು ಬರೋ ಲಕ್ಷಣವೇ ಇಲ್ಲ.

ಪ್ರದ್ಯುಮ್ನ : ಯಾರದೋ ಸಂದರ್ಶನ ಅಂತ ನೆವ ಮಾಡ್ಕಂಡು ಸ್ಟಾರ್ ಹೋಟಲಲ್ಲಿ ಮಲಗಿರಬೇಕು. ಇನ್ನು ನೆತ್ತಿ ಮೇಲೆ ಸ್ಟಾರ್‌ಗಳು ಬಂದ್ರೇ ಆ ವಯ್ಯನಿಗೆ ಎಚ್ಚರ ಆಗೋದು.

ಮೈಲಾರಿ : ಹೂಂ; ನಡೀ ಒಳಗಡೆ ಹೋಗಿ ಕೂತು ಒಂದಿಷ್ಟು ಬೂಸಾ ಸಾಹಿತ್ಯವನ್ನು ಬುಟ್ಟಿಗೆ ತುಂಬೋಣ.

ವಿಷಕಂಠ : ಸರಿ; ಸರಿ; ನೀವು ನಡೀರಿ, ನಾನು ಸ್ವಲ್ಪ ಪೋಸ್ಟ್ ಆಫೀಸ್ ಹತ್ರ ಹೋಗಿ ಬರ್ತೀನಿ.

(ವಿಷಕಂಠ ನಿರ್ಗಮಿಸುವನು. ಪ್ರದ್ಯುಮ್ನ, ಮೈಲಾರಿ ಸಿಗರೇಟೆಳೆದು ಕಛೇರಿಯ ಒಳ ಹೋಗಲು ತಯಾರಾಗುವರು).

ದೃಶ್ಯ-3

(ಸಂಪಾದಕರ ಮನೆ. ಸಂಪಾದಕರೊಂದಿಗೆ ವಿಷಕಂಠ ಕುಳಿತಿದ್ದಾನೆ. ಪರಸ್ಪರ ಮಾತುಕತೆ ನಡೆಯುತ್ತಿದೆ)

ವಿಷ : ಈ ವಾರದ ಸಂಪಾದಕೀಯ ತುಂಬಾ ಚೆನ್ನಾಗಿದೆ ಸರ್; ನಿಜವಾಗಿಯೂ ಒಳಚರಂಡಿ ಹೊಕ್ಕೇ ಬರೆದಂತಿದೆ.

ಸಂ : (ಸಂತಸದಿಂದ ಹುಬ್ಬು ಕುಣಿಸುತ್ತಾ) ಮತ್ತೆ ಏನು ತಿಳಿದಿದ್ದೀರಿ? ಪೆನ್ ಈಜ್ ಮೈಟಿಯರ್ ದ್ಯಾನ್ ಸೋರ್ಡ್. ಕಾರ್ಪೊರೇಷನ್‌ನಿಂದ ಕ್ಯಾಬಿನೆಟತನಕ ಎಲ್ಲರಿಗೂ ನೀರು ಕುಡ್ಸಿದೀನಿ.

ವಿಷ : ಬರೀ ನೀರಲ್ಲ ಸರ್; ಕೊಚ್ಚೆ ನೀರು ಕುಡ್ಸಿದೀರ; ನಮ್ಮ ದೇಶದ ಕೊಳಚೇನ ಹೀಗೆ ಅವರಿವರಿಗೆ ಕುಡಿಸಿ ಕ್ಲೀನ್ ಮಾಡಿಸೋಕೆ ನಿಮ್ಮಂತ ಜನ ಬೇಕು ಸರ್;

ಸಂ : ಹೌದು; ಏನು ಮಾಡ್ತೀರಿ? ನಾನು ಹೇಳೋದು, ಬರೆಯೋದು ಸಾಕಷ್ಟಿರುತ್ತೆ. ಅದ್ರೆ ಪೇಜಸ್ಸೇ ಇಲ್ವರ್ರೀ?

ವಿಷ : ಅದಕ್ಕೇ ಅಂತ ಒಂದು ವಿಶೇಷಾಂಕ ತಂದು ಬಿಡಿ ಸರ್;

ಸಂ : ತರಬಹುದ್ರೀ; ಆದರೆ ಆ ನನ್ಮಗ ಪಬ್ಲಿಷರ್ ಪಂಪಾಪತಿಗೆ ಹೊಸೀಬೇಕಲ್ಲ. ಈಗಲೇ ನನ್ಮೇಲೇ ಕಂಪ್ಲೇಂಟ್ ಇದೆ.

ವಿಷ : ಏನಂತ ಸರ್?

ಸಂ : ಪತ್ರಿಕೆ ತುಂಬಾ ಸಂಪಾದಕೀಯ ಅಂತ ತನಗಾಗದವರ ವಿರುದ್ದ ವಿಷ ಕಕ್ತಾನೆ. ಸಾಹಿತ್ಯಕ್ಕಿರಲಿ, ಅಡ್ವರಟೈಸ್‌ಗೇ ಜಾಗ ಇಲ್ಲ ಅಂತ;

ವಿಷ : ಪತ್ರಿಕೆ ಅಂದ ಮೇಲೆ ಒಂದು ಸಂಪಾದಕೀಯ ಇರೋದು ಬೇಡವಾ ಸರ್? ಸಂಪಾದಕೀಯ ಅಂದ್ರೆ ಸುಭಾಷಿತಾನ ಸರ್ ಒಂದು ಲೈನಲ್ಲಿ ಮುಗಿಸೋಕೆ? ಪತ್ರಿಕೆಯ ಧ್ಯೇಯ, ಧೋರಣೆ, ಸಾಮಾಜಿಕ ಸ್ಥಿತಿಗತಿಗೆ ಸ್ಪಂದಿಸೋಕೆ, ತೀವ್ರವಾಗಿ ಪ್ರತಿಕ್ರಿಯಿಸೋಕೆ ಅಂತ ಒಂದ್ನಾಲ್ಕು ಪುಟ ಬೇಡವಾ ಸರ್? ಪೆನ್ನು ಕತ್ತಿಯಾದರೆ, ಸಂಪಾದಕೀಯ ರಕ್ತರೂಪಿ ರೆಡ್ಡಿಂಕು. ನಿಮಗೆ ಪ್ರತಿಭೆ ಇದೆ, ಅನುಭವ ಇದೆ. ಸೂಕ್ಷ್ಮ ಸಂವೇದನಾ ದೃಷ್ಟಿಯಿದೆ, ಬರೀತೀರ. ಅದು ತಪ್ಪಾ?

ಸಂ : ಅದು ಇವರಿಗೆ ಎಲ್ರೀ ಅರ್ಥವಾಗಬೇಕು? ಒಳ್ಳೆಯವರಿಗೆ ಕಾಲ ಇಲ್ಲರೀ. ಒಂದು ಮೆಣಸಿನಕಾಯಿ ಬೋಂಡ ಕಟ್ಟಿಕೊಡೋ ಕಾಗದದಲ್ಲೂ ಒಂದು ಸಂಪಾದಕೀಯದ ತುಣುಕು ಇರಬೇಕು. ಅದನ್ನ ಓದಿ ಶ್ರೀ ಸಾಮಾನ್ಯನ ನೆತ್ತರು ಕುದಿಯಬೇಕು. ಸಾಮಾಜಿಕ ಕ್ರಾಂತಿಯಾಗಬೇಕು. ನನ್ನ ಆಸೆ ಯಾವತ್ತು ಈಡೇರುತ್ತೋ?

ವಿಷ : ಅಲ್ಲ ಸಾರ್; ಬೇರೆಯವರ ಮಾತು ಹಾಗಿರಲಿ, ನಮ್ಮ ಸ್ಟಾಫ್‌ನಲ್ಲಾದರೂ ನಿಮ್ಮ ಸಂಪಾದಕೀಯದ ಬಗ್ಗೆ ಒಂದು ಒಳ್ಳೆ ಮಾತು ಬೇಡವಾ ಸರ್?।

ಸಂ : ಇದೇನ್ರೀ ಹೀಗೆ ಹೇಳ್ತಿದೀರಿ? ಯಾರ್ರೀ ಅವರು ನನ್ನ ಸಂಪಾದಕೀಯದ ಬಗ್ಗೆ ತಲೆ ಕೆಡಿಸಿಕೊಂಡಿರೋರು?

ವಿಷ : ಆ ಶೈಲೇಶ, ಪರ್ಮೇಶಿ, ಭಾಮಾ ಯಾರಿಗೂ ನಿಮ್ಮ ಸಂಪಾದಕೀಯ ಅಂದ್ರೆ

ಅಗಲ್ಲ. ತಮಗೆ ಕೊಡೋ ಕಾಂಪ್ಲಿಮೆಂಟರೀಲಿ ಆ ಪೇಜುಗಳನ್ನು ಹರಿದು ಬುಟ್ಟಿಗೆ ಹಾಕಿರ್ತಾರೆ.

ಸಂ : ಹೌದಾ? ಇದು ನನ್ನ ಗಮನಕ್ಕೆ ಬಂದಿಲ್ಲವಲ್ರೀ?

ವಿಷ : ತಾವ್ಯಾಕೆ ಸರ್ ಅಂತಹ ಕ.ಬುಗಳ ಕಡೆ ಗಮನ ಹರಿಸ್ತೀರಿ. ನೀವೇನು? ನಿಮ್ಮ ಲೆವೆಲ್ಲೇನು? ಇದನ್ನೆಲ್ಲಾ ನಾವೂ ನಿಮ್ಮ ಗಮನಕ್ಕೆ ತರಬಾರದು. ಆದ್ರೂ ತಾವು ಅನ್ನ ಇಟ್ಟೋರು. ಆ ಋಣ ತೀರ್ಸಕ್ಕಾದರೂ ನಾವು ಮನಸು ಬಿಚ್ಚಿ ಮಾತಾಡಬೇಕಾಗುತ್ತೆ.

ಸಂ : ಏನು ಅನ್ಯಾಯಾರೀ; ನಮ್ಮ ಸಂಸ್ಥೆಯ ಅನ್ನ ತಿಂದುಕೊಂಡು ನಮ್ಮ ಪತ್ರಿಕೆಯ ಸಂಪಾದಕೀಯ ಓದಲ್ಲ ಅಂದ್ರೆ ಬೇರೆಯವರಿಗೆ ಏನು ಹೇಳೋದ್ರಿ?

ವಿಷ : ಅದಿರ್ಲಿ ಸರ್; ಕೋತಿ ತಾನು ಕೆಡೋದಲ್ಲದೆ, ವನಾನೆಲ್ಲಾ ಕೆಡುಸ್ತು ಅನ್ನೋ ಹಾಗೆ ಆ ಸುನಿತಾಳ ತಲೆಯಲ್ಲೂ ವಿಷ ಬೀಜ ಬಿತ್ತಿದಾರೆ. ಪಾಪ; ಅವಳು ಒಳ್ಳೇ ಹುಡುಗಿ ಸರ್; ಈ ಮೈಲಾರಿ, ಪ್ರದ್ಯುಮ್ನ ಇವರಿಗಾದರೂ ಬುದ್ಧಿ ಬೇಡವಾ? ಆ ಹುಡುಗಿ ಹಿಂದೆ ಸತ್ತೋದಾ ಸರ್?

ಸಂ : ಇವರೂ ಯಾಕೆ ಹೀಗಾಗಿದಾರೆ?

ವಿಷ : ವಯಸ್ಸು ಸಾರ್ ವಯಸ್ಸು. ಅದೊಂದು ವಿಷಯ ಬಿಟ್ರೆ ಇಬ್ಬರೂ ಯೋಗ್ಯರು ಸರ್. ಅದಕ್ಕೇ ಆ ಪರ್ಮೇಶಿ, ಶೈಲೇಶರಿಗೆ ನಮ್ಮ ತಲೆ ಕಂಡ್ರೆ ಆಗಲ್ಲ.

ಸಂ : ಇದನ್ನೆಲ್ಲಾ ನೀವು ಮೊದಲೇ ಯಾಕೆ ಹೇಳಲಿಲ್ಲ;

ವಿಷ : ಏನಂತ ಹೇಳೋದು ಸರ್; ಚಾಡಿಕೋರ, ಲುಚ್ಚ ಅಂತಾರೆ. ನೀವು ಬಿಟ್ರೆ ನಿಯತ್ತಿನಿಂದ ಯಾರು ಕೆಲ್ಸ ಮಾಡ್ತಿದಾರೆ ಸರ್. ಆ ನಾಲ್ಕು ಜನ ಸೇರಿ ತಮ್ಮ ಕೆಲಸಾನೆಲ್ಲಾ ನಮಗೆ ಹಂಚ್ತಾರೆ. ಇಡೀ ಪೇಪರ್ ಕಂತೆ ತಂದು ನಮ್ಮ ಟೇಬಲ್‌ಗೆ ಒಗೆದು ಹೋಗ್ತಾರೆ. ನೀವು ಹೇಳಿ ತರಿಸಿದ ಲೇಖನಗಳ ಮಂಗಮಾಯ ಮಾಡ್ತಾರೆ. ನಿಮ್ಮ ಸಂಪಾದಕೀಯಕ್ಕೆ ಬರೋ ಪ್ರಶಂಸೆ, ಹೊಗಳಿಕೇನೆಲ್ಲಾ ಹರಿದು ಬುಟ್ಟಿಗೆ ತುಂಬ್ತಾರೆ. ಮೊನ್ನೆ ಅದೇ ಸರ್, ಆ ಖ್ಯಾತ ಕತೆಗಾರರು' ಕೋಡುಪಲ್ಲಿ ಪಿಳ್ಳೆ'ಯವರ ಕತೇನ ''ಇದು ಕೃತಿಚೌರ್ಯ. ನಾನೇ ಇದನ್ನು ಹಿಂದೆ ಓದಿರುವೆ'' ಎಂದು ವಾಪಸ್ಸು ಹಾಕಿದ್ದಾಳೆ ಆ ಭಾಮಾ. ಒರಿಜಿನಲ್ ಕತೆಗಾರರು ಹೇಳಕ್ಕೆ ಮುಂಚೆ

ಇವಳ್ಯಾರು ಸರ್ ಹಾಗೆ ಡಿಸೈಡ್ ಮಾಡೋಕೆ? ಪಾಪ; ನಿಮ್ಮ ಆಸ್ನೇಹಿತರು ಎಷ್ಟು ನೊಂದುಕೊಂಡ್ರೋ?...

ಸಂ : (ಆಶ್ಚರ್ಯದಿಂದ) ಹೀಗೆಲ್ಲಾ ಆಗ್ತಾ ಇದೀಯ?

ವಿಷ : ಅಲ್ಲಿ ಹೇಳೋರು, ಕೇಳೋರೇ ಇಲ್ಲ ಸರ್. ಮತ್ತೆ ಆ ಪರ್ಮೇಶಿ ಮೊನ್ನೆ ಕುಂಭೀಭಟ್ಟರ ಕವಿತೇನ 'ಸಂಪಾದಕೀಯ ಮತ್ತು ಜಾಹಿರಾತುಗಳ ನಡುವೆ ಸ್ಥಳಾವಕಾಶವಿಲ್ಲದೆ ತಮ್ಮ ಕವಿತೆ ಪ್ರಕಟಿಸಲಾಗುದುದಕ್ಕೆ ವಿಷಾಧಿಸುತ್ತೇವೆ' ಅಂತ ಬರೆದು ಹಾಕಿದಾನೆ. ಒಂದು ಪತ್ರಿಕೆ ಮೌಲ್ಯನ ಹೀಗೆ ಕಳೀಬಹುದಾ ಸರ್?

ಸಂ : ಹೀಗೆಲ್ಲಾ ಆಗಕ್ಕೆ ಯಾರ್ರೀ ಕಾರಣ? ನನಗೆ ಇವರುಗಳ ದ್ರೋಹ ಚಿಂತನೆಯ ಬಗ್ಗೆಯೇ ಒಂದು ಎಡಿಟೋರಿಯಲ್ ಬರೀಬೇಕು ಅನಿಸ್ತಿದೆ.

ವಿಷ : ಇದಕ್ಕೆಲ್ಲಾ ಕಾರಣ ಆ ಕೋದಂಡ ಸರ್. ನಿಮ್ಮನ್ನ ಬಿಟ್ರೆ ನೆಕ್ಸ್ಟ ಸೀಟಿಲ್ಲಿಲ್ಲದಿರೋನು ಅಂದ್ರೆ ಅವನೇ; ಕ್ಯಾನ್ವಾಸಿಗಿಷ್ಟು ಬಣ್ಣ ಹುಯಿದು ಆ ಪಂಪಾಪತಿಯವರಿಗೆ ಪಂಪು ಹೊಡೆಯಕ್ಕೆ ಹೋಗ್ತಾನೆ. ನಮ್ಮ ಬಗ್ಗೆ ಅಂತೂ ಇಲ್ಲಸಲ್ಲದ್ದನ್ನೆಲ್ಲಾ ಹೇಳಿದಾನೆ. ಅವನ ಕುಮ್ಮಕ್ಕು ಇದೆ ಅಂತನೇ ಸರ್ ಆ ಪರ್ಮೇಶಿ ಅಂಡ್ ಕಂ. ಹಾಗೆ ಎಗರಾಡೋದು.

ಸಂ : ಆ ಕೋದಂಡ ಈ 'ಕಾಕಾಪುಡಿ' ವ್ಯವಹಾರ ಬೇರೆ ಮಾಡ್ತಾನಾ?

ವಿಷ : ಅಯ್ಯೋ! ಅದೊಂದು ದುರಂತ ಸರ್. ಯಾರನ್ನೋ ಅರೆಕಾಲಿಕ ಸಹ ಸಂಪಾದಕಿ ಅಂತ ಕೂರ್ಸಿದಾನೆ. ಅವಳ ಕೈಲಿ ಇದ್ದ ಬದ್ದ ಇಂಗ್ಲೀಷ್ ಮ್ಯಾಗಜಿನ್‌ನ ಲೇಖನಗಳನ್ನೆಲ್ಲಾ ತರ್ಜುಮೆ ಮಾಡುಸ್ತಾನೆ. ಸತ್ಯಕತೆ ಅಂತೆ ಸತ್ಯಕತೆ; ತನಗೆ ಬರಲ್ಲವಲ್ಲ ಇಂಗ್ಲೀಷ್ ಪಿಂಡ. ಆ ಲೇಖನಗಳಿಗೆಲ್ಲಾ ಅವರಿವರ 'ಡೋಂಗಿ' ಹೆಸರು ಹಾಕಿ ಪ್ರಿಂಟು ಮಾಡಿಸಿ ಯದ್ವಾತದ್ವಾ ಬಿಲ್ ಮಾಡಿಸಿಕೊಳ್ತಾನೆ.

ಸಂ : ಅವಳ್ಯಾರ್ರೀ ಸಹ ಸಂಪಾದಕಿ ಚಿಟ್ಟೆ? ನನಗೇ ಗೊತ್ತಿಲ್ಲ.

ವಿಷ : ಅದೇ, ನಮಗೂ ಗೊತ್ತಿತ್ತಿಲ್ಲ ಸರ್; ಅವಳು ಅಫೀಸಿಗೆ ಎಲ್ಲಿ ಬರ್ತಾಳೆ? 'ಪಂಪಾಪತಿ' ಯವರ ಕೃಪಾಪೋಷಿತೆ. ಮನೇಲೋ, ಪಾರ್ಕಲ್ಲೋ, ಹೋಟ್ಲಲ್ಲೋ ಕೂತ್ಕಂಡು ಕೋದಂಡನಿಗೂ ಪಂಪಾಪತಿಯವರಿಗೂ ದುಭಾಷಿಯಾಗಿ, ಏಜೆಂಟಾಗಿದಾಳೆ. ಇಷ್ಟು ಸಾಲದು ಅಂತ ಉದಯೋನ್ಮುಖರು, ಸ್ನೇಹಿತರು ಅಂತ ಸಾಹಿತ್ಯದ ಗಂಧ, ಗಾಳಿ

ಗೊತ್ತಿಲ್ಲದವರ ಕತೆ, ಕವನ ಎಲ್ಲಾ ಪಬ್ಲಿಷ್ ಮಾಡಿಸ್ತಾನೆ. ಒಟ್ಟಿನಲ್ಲಿ 'ಧೂಮಕೇತು' ವಿನ ಸ್ಟಾಂಡರ್ಡ್‌ನ ನೆಲಕಚ್ಚಿದಾರೆ. ನೀವೇ ನೋಡ್ತೀಟೀರಲ್ಲ ಸರ್?

ಸಂ : ಅಲ್ಲಾರೀ ಎಲ್ಲಾ ನಾವೇ ಮಾಡಕ್ಕೆ ಆಗುತ್ತೇನ್ರೀ? ಏನೋ ಎಲ್ಲಾ ಸುಸೂತ್ರವಾಗಿ ನಿರ್ವಹಿಸ್ತಾರೆ ಅಂತ ನಾವು ನಂಬಿಕೆ ಇಟ್ಟಿದ್ದೇ ತಪ್ಪಾಯ್ತಲ್ಲ.

ವಿಷ : ಇನ್ನೂ ಒಂದು ವಿಷಯವಿದೆ ಸರ್; (ಅಕ್ಕಪಕ್ಕ ನೋಡಿ ಮುಂದೆ ಬಗ್ಗಿ ಹೇಳುವನು) ಕೋದಂಡ ನಿಮ್ಮ ಹೆಸರು ಹೇಳಿಕೊಂಡು ಅವರಿವರನ್ನ ಬ್ಲಾಕ್‌ಮೇಲ್ ಮಾಡ್ತಿದಾನೆ;

ಸಂ : (ತಾವೂ ಮುಂದೆ ಬಗ್ಗಿ ಗಾಬರಿಯಿಂದ) ಹೌದಾ?

ವಿಷ : ಹೌದು ಸರ್; ಗೌರ್ನಮೆಂಟ್ ಕಛೇರಿಗಳು, ಕಂಪೆನಿಗಳು, ಬ್ಯಾಂಕು, ಬಂಕುಗಳಿಗೆ ಹೋಗಿ 'ರೋಲ್‌ಕಾಲ್' ಮಾಡ್ತಾನಂತೆ.'ಮಾಮೂಲಿ ಮಡಗಿ, ಇಲ್ಲಾಂದ್ರೆ ನಿಮ್ಮ ಬಗ್ಗೆ ನಮ್ಮ ಸಂಪಾದಕರ ಕೈಲಿ ಕಕ್ಕುಸ್ತೀನಿ' ಅಂತ ನಿಮ್ಮ ಸಂಪಾದಕೀಯವನ್ನೇ ಬಂಡವಾಳ ಮಾಡಿಕೊಂಡು ಅವರಿಂದ ದುಡ್ಡು ಕಕ್ಕಿಸ್ತಿದಾನಂತೆ;

ಸಂ : 'ಮೈಗಾಡ್' ಏನ್ರೀ ಮಾಡೋದು?' ಪೆನ್ನು ಕತ್ತಿ ಅಂದ್ಕೊಂಡಿದ್ದೆ, ಇವ ಬ್ಲೇಡ್ ಮಾಡಿಕೊಂಡು ಅವರಿವರಿಗೆ ಸೋಪು ಹಚ್ತಾ ಇದಾನಲ್ಲ;

ವಿಷ : ನೀವು ಬಿಗಿ ಮಾಡಬೇಕು ಸರ್,ಎಲ್ಲಾ ಸರಿ ಹೋಗುತ್ತೆ.

ಸಂ : ಹೌದು; ನನಗೂ ಹಾಗೇ ಅನಿಸುತ್ತೆ. ನೀವು ಹೇಳಿದ ಹಾಗೇ ಮಾಡ್ತೀನಿ.

ವಿಷ : ಸರ್; ಏನೋ ಒಂಥರಾ ವಾಸನೆ ಅಲ್ವಾ?

ಸಂ : ಓಹ; ಅದಾ? ನಾನು ಚರಂಡಿ ಮೇಲೆ ಸಂಪಾದಕೀಯ ಬರ್ದೆ ಅಂತ ಸಿಟ್ಟುಕೊಂಡು ಕಾರ್ಪೊರೇಶನ್‌ನವರು ಚರಂಡಿನೇ ಕ್ಲೀನ್ ಮಾಡಿಲ್ಲ ಅದರ ವಾಸನೆ.

ವಿಷ : ಸರಿ; ಸರ್; ನಾನಿನ್ನು ಬರ್ತೀನಿ. ನಾನು ಹೇಳಿದ್ದು ಮರೀಬೇಡಿ.

(ವಿಷಕಂಠ ನಿರ್ಗಮಿಸುವನು. ಸಂಪಾದಕರು ಏನನ್ನೋ ಯೋಚಿಸುತ್ತಾ ಶೂನ್ಯದತ್ತ ದೃಷ್ಟಿ ಬೀರಿ ಕೂರುವರು).

(ಸಶೇಷ)

Statement about ownership and other particulars about newspapper APARANJI to be published in every year in the First issue appearing after the last day of February.

FORM IV
(SEE RULE 8)

1.	Place of Publication	Bangalore
2.	Periodicity	Monthly
3.	Printer's Name	V.R. Nath
	Nationality	Indian
	Address	44, Sampige Road, Malleswaram Bangalore - 560 0003
4.	Publisher's Name	M. Shivakumar
	Nationality	Indian
	Address	Aparanji Karyalaya 36, 6th Main, Road, Malleswaram Bangalore - 560 003
5.	Editor's Name	M. Shivakumar
	Nationality	Indian
	Address	Aparanji Karyalaya 36, 6th Main Road, Malleswaram Bangalore - 560 003
6.	Name and address of Individuals who own the News Paper and Partners/Shareholder holding more than one percent of the total capital	M. Shivakumar Sole Proprietor Aparanji Karyalaya 36,6th Main Road, Malleswaram Bangalore - 560 003

I, M. Shivakumar, hereby declare that the Particulars given about are true, to the best of my knowledge and belief.

sd/-

1st March 1996

M. Shivakumar
Publisher

Registered No. BGW 180

Printed by V.R. NATH for the Publisher M. SHIVAKUMAR, Published and owned by M. SHIVA KUMAR. 36. 6th Main Road, Malleswaram, Bangalore-560 003. Printed at IMPRESSIONS. 404. Sampige Road, Malleswaram, Bangalore-560 003. Editor : M. SHIVAKUMAR.